
# ಕಾನನ

ಜನವರಿ-2025

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ




**ಪ್ರಧಾನ ಸಂಪಾದಕರು**

ಡಾ. ಅಶ್ವತ್ಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಓ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಡಾ. ಮಧುಸೂದನ ಹೆಚ್. ಸಿ.

ಮೌನೇಶ್ ಕನಸುಗಾರ

ಹುಸೇನ್ ನೇಣಿಕೆ



© ಗುರುಪ್ರಸಾದ್ ಕೆ. ಆರ್.

ಜನವರಿ–2025

## ಲೇಖನಗಳು

* ಹೊನ್ನ – ಮಿಕ ಬೇಟೆ – ಡಾ. ಚಂದ್ರಪ್ಪ ಎಚ್.

* ಕಾನನದ ಬೆಡಗಿ ಸೀತಾಳೆ ಬಗ್ಗೆ ಗೊತ್ತಾ? – ಮನೋಜ್ ದೊಡವಾಡ

* ಅದೊಂದು ಬೇರೆಯದೇ ಅನುಭೂತಿ... – ಧನಂಜಯ ಜೀವಾಳ

* $CO_2$ ಉಗುಳುವ ಆರ್ಕಟಿಕ್ ಕಾರ್ಖಾನೆ! – ಜೈಕುಮಾರ್ ಆರ್.

* ನಿರೀಕ್ಷೆ (ಕವನ) – ಕಲ್ಪನ ಎಂ.

* ಪ್ರಕೃತಿ ಬಿಂಬ – ವಿನೀತ್ ಕರ್ಥ, ದೀಪ್ತಿ ಎನ್.

ಮುಖಪುಟ ಛಾಯಾಚಿತ್ರ
ಹಪ್ಪಟೆ ಹಾವು

ಮುಖಪುಟ
ಧನರಾಜ್ ಎಂ.

ವಿನ್ಯಾಸ
ಧನರಾಜ್ ಎಂ.



© ಪವನ್ ಕುಮಾರ್ ಟಿ. ಎಸ್.




# ಹೊನ್ನ– ಮಿಕ ಬೇಟೆ

ಸರಿ ಸುಮಾರು 95 - 96ರ ದಿನಗಳು. ಮಂಗನಾಯಕನಹಳ್ಳಿ ಬೆಟ್ಟಗುಡ್ಡಗಳಿಂದ ಸುತ್ತುವರೆದ ಸುಂದರವಾದ ಪುಟ್ಟ ಹಳ್ಳಿ. ತುಂಗಭದ್ರಾ ನದಿ ತೀರದ ಹಳ್ಳಿ, ಹುಲ್ಲಿನ ಗುಡಿಸಲುಗಳ ಮನೆಗಳಿಂದ ಕಂಗೊಳಿಸುತ್ತಿತ್ತು. ಜೀವಸೆಲೆಯಾದ ಹೊಳೆಯಿಂದ, ಜನತೆ ನೀರಾವರಿ ಕೃಷಿಗೈದು ತಕ್ಕಮಟ್ಟಿಗೆ ನೆಮ್ಮದಿಯ ಸಾಮಾಜಿಕ ಬದುಕು ಕಟ್ಟಿಕೊಂಡಿದ್ದರು. ಆಗಾಗ, ಹಬ್ಬ-ಹರಿದಿನ, ಉತ್ಸವ ಹಾಗೂ ನಾಟಕಗಳ ಆಚರಣೆ ಜನತೆಯಲ್ಲಿ ಬದುಕ ಪ್ರೀತಿ ಉಕ್ಕಿಸುವಂತಿತ್ತು! ಊರ ಮಧ್ಯೆ ಸಾಗುವ ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಲಂಬಾಣಿ ತಾಂಡಾದ ಜನತೆ ಮತ್ತು ಇತರೆ ಜನತೆ ಅತ್ಯಂತ ಸಾಮರಸ್ಯ, ಪ್ರೀತಿ, ಕರುಣೆ, ಮಾನವೀಯ ಗುಣಗಳಿಂದ ಭೇದ-ಭಾವ ತೊರೆದು ಅನ್ಯೋನ್ಯತೆಯಿಂದ ಬಾಳುತ್ತಿದ್ದರು. ಕೃಷಿ ಕೆಲಸಗಳಿಗೆ, ಎಲ್ಲರೂ ಕೂಡಿ ಹೊಲಗದ್ದೆಗಳಲ್ಲಿ ಹಗಲಿರುಳು ದುಡಿಯುತ್ತಿದ್ದ ಕಾರಣ, ಸಹಜವಾಗೇ ಮನುಷ್ಯ ಪ್ರೀತಿ ಒಡಲಾಳದಿ ಒಡಮೂಡಿತ್ತು. ಘನತೆ, ಗೌರವ ಇಮ್ಮಡಿಗೊಂಡಿತ್ತು! ಲಂಬಾಣಿಗರ ಹಟ್ಟಿಗಳು ತುಸು ಬೆಟ್ಟದಂಚಿನಲ್ಲಿದ್ದುದರಿಂದ ಸ್ವಾಭಾವಿಕವಾಗೇ ಕಾಡಿನ ನಂಟು ಅವರಿಗೆ ದಿನನಿತ್ಯದ ಬದುಕಲಿ ಹಾಸುಹೊಕ್ಕಾಗಿತ್ತು. ಅಲ್ಲಲ್ಲಿ, ಸಿಕ್ಕುತ್ತಿದ್ದ ಕಾಡಿನ ಉಪ-ಉತ್ಪನ್ನಗಳಾದ ಅಂಟು, ಗೆಡ್ಡೆ-ಗೆಣಸು, ಜೇನು, ಕವಳೆಹಣ್ಣು, ಕಾರೆಕಾಯಿ, ಅಂಜೂರ, ನಾಗರ, ಸಿಂಬಳೆ, ದ್ವಾರಹುಣಸೆ ಹಣ್ಣು, ಬೋರೆ ಹಣ್ಣು, ಬೆಳವಲ ಹಣ್ಣು, ಮೆಕ್ಕೆಕಾಯಿ, ಮಾವು, ನೇರಳೆ ಹಾಗೂ ಪೇರಲ ಇತ್ಯಾದಿ ಲಂಬಾಣಿಗರ ಪಾಲಿಗೆ ಬಹುನೆಚ್ಚಿನ ಹಾಗೂ ತುತ್ತಿನ ಚೀಲ ಪೊರೆಯುತ್ತಿದ್ದ ಪ್ರಾಕೃತಿಕ ಆಹಾರ ಪದಾರ್ಥಗಳಾಗಿದ್ದವು. ಅದೆಷ್ಟೋ ಜನತೆ,

ಬುಧವಾರಕ್ಕೊಮ್ಮೆ ಜರುಗುತ್ತಿದ್ದ 'ಊರ ಸಂತೇಲಿ' ಕಾಡಿನ ಉತ್ಪನ್ನಗಳ ಮಾರಾಟ ಮಾಡಿ ಜೀವನ ಕಂಡುಕೊಂಡಿದ್ದರು. ಕೆಲವೊಮ್ಮೆ, ಸುತ್ತಮುತ್ತಲ ಹಳ್ಳಿಗಳಿಗೂ ತೆರಳಿ, ತಲೆ ಮೇಲೆ ಬುಟ್ಟಿ ಹೊತ್ತು ಇಡೀ ದಿನ ಊರಲೆದು ಹಣ್ಣು-ಹಂಪಲು ಮಾರಿ ಬದುಕು ಅರಸುತ್ತಿದ್ದರು. ಮತ್ತೊಂದೆಡೆ, ಆಗ ದನ ಕರುಗಳ ಸಾಕಣೆ, ಕುರಿ-ಕೋಳಿ, ಮೇಕೆಗಳ ಸಲಹುವುದು, ಪ್ರತಿಯೊಬ್ಬರ ಮನೆಯ ಅಚ್ಚುಮೆಚ್ಚಿನ ಉಪಕಸುಬಾಗಿತ್ತು. ಹೀಗಾಗಿ, ಹಾಲು, ಹಾಲಿನ ಉತ್ಪನ್ನಗಳಾದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಹಾಗೂ ಮಾಂಸಗಳ ಬಳಕೆ ಹಿತಮಿತವಾಗಿ ಆರೋಗ್ಯಕರವಾಗಿತ್ತು.







ಬೇಸಿಗೆ ಹೊರತು, ಉಳಿದೆಲ್ಲ ಋತುಗಳಲ್ಲಿ, ಸುತ್ತಲೂ ಬೆಟ್ಟ-ಗುಡ್ಡಗಳು ಹಚ್ಚ-ಹಸಿರಿನಿಂದ ರೋಮಾಂಚನಗೊಳಿಸುವಂತೆ ಸಂಪದ್ಭರಿತವಾಗಿ ಮೈದುಂಬಿರುತ್ತಿದ್ದವು. ಹಾಗಾಗಿ, ಚುಕ್ಕೆ ಜಿಂಕೆ, ಮೊಲ, ನರಿ, ತೋಳ, ಕಾಡು ಕುರಿ, ಕಾಡು ಬೆಕ್ಕು, ಕಾಡು ಕೋಳಿ, ಗೌಜುಗ, ನವಿಲು, ಉಡ, ಊಸರವಳ್ಳಿ ಹಾಗೂ ಮಿಕ (ಕಾಡು ಹಂದಿ) ಮುಂತಾದ ಪಶು-ಪಕ್ಷಿಗಳು ಹೇರಳವಾಗಿದ್ದವು. ಜೊತೆಗೆ, ಬೆಟ್ಟದ ಇಳಿಜಾರುಗಳಲ್ಲಿ ಕಣಿವೆಗಳಡಿ, ಮಳೆ ನೀರು ಇಂಗಿ, ಸಂಗ್ರಹಗೊಂಡು ಅಲ್ಲಲ್ಲಿ ಕೆರೆ-ತೊರೆ, ಹಳ್ಳ-ಕೊಳ್ಳಗಳು ರೂಪಗೊಂಡು, ವನ್ಯಜೀವಿಗಳಿಗೆ ಸ್ವಾಭಾವಿಕ ನೀರಿನ ಜೀವಸೆಲೆಯಾಗಿದ್ದವು. ಆಗೆಲ್ಲಾ, ಜನತೆ ನಡೆದಾಡಿಯೇ ದಿನವಿಡೀ ಅಲೆದು, ಮೈಮುರಿದು, ಮಳೆ, ಚಳಿ, ಬಿಸಿಲೆನ್ನದೆ ಮಣ್ಣಿನೊಂದಿಗೆ ಬೆರೆತು ಹೊಲ-ಗದ್ದೆಗಳಲ್ಲಿ ಬೆವರ ಸುರಿಸಿ, ಕೃಷಿ ಕೆಲಸದಲಿ ನಿರತರಾಗಿದ್ದರು. ಈ ಕಾರಣಕ್ಕನೇ, ಬಹುತೇಕರು (ಹೆಂಗಸರು, ಗಂಡಸರು ಮಕ್ಕಳೂ ಸಹಿತ) ನೋಡಲು ಸಪೂರವಿದ್ದರೂ, 'ಜವಾರಿ ಕೋಳಿಯಂತೆ' ಆರೋಗ್ಯಕರವಾಗಿ ದಷ್ಟ-ಪುಷ್ಟರಾಗಿರುತ್ತಿದ್ದರು. ಮತ್ತೊಂದು ವಿಶೇಷತೆಯೆಂದರೆ, ಊರ ಇತರೆ ಜನತೆ ಕುರಿ, ಕೋಳಿ, ಮೇಕೆಗಳ ಮಾಂಸವನ್ನು ಊಟಕ್ಕೆ ಬಳಸ್ತಾಯಿದ್ರೆ; ಅತ್ತ, ಲಂಬಾಣಿಗರು ಇವುಗಳ ಜತೆಗೆ 'ಮಿಕ'ದ ಮಾಂಸ ಅವರ ಅತ್ಯಂತ ಪ್ರಿಯವಾದ ಖಾದ್ಯವಾಗಿತ್ತು. ಆಗಾಗ್ಗೆ, ಬೇಸಿಗೆಯ ದಿನಗಳಲ್ಲಿ ಆಹಾರ ಅರಸಿ ಕಾಡಂಚಿಗೆ ಬರುವ 'ಮಿಕಗಳ' ಬೆನ್ನಟ್ಟಿ, ತಂಡೋಪತಂಡವಾಗಿ ಈಟಿ, ಭರ್ಜಿಗಳ ಹಿಡಿದು, ಬಲೆಯೊಂದಿಗೆ ಬೇಟೆಯಾಡುವುದು ಅವರ ಬಹುಮೆಚ್ಚಿನ ಹವ್ಯಾಸವಾಗಿತ್ತು. ಇನ್ನು, ಕೆಲವರಿಗೆ ಬೇಟೆ ಪ್ರತಿಷ್ಠೆಯ ವಿಷಯವಾಗಿತ್ತು. ಬೇಟೆ ಸಿಕ್ಕ ದಿನ, ಊರ ತುಂಬಾ ಹಬ್ಬವೋ ಹಬ್ಬ! ಅಲ್ಲಿಯೇ, ಊರಾಚೆಯ ಮರದಡಿ ಎಲ್ಲವನ್ನೂ ಶುಚಿಗೊಳಿಸಿ, ಚಿಕ್ಕ ಚಿಕ್ಕ ಪಾಲು

ಹಾಕಿ, 'ಮಿಕದ ಮಾಂಸ' ಪಡೆವಲ್ಲಿ ಹರಸಾಹಸ ಪಡುತ್ತಿದ್ದರು! ಕೆಲವು ಸಲ, ಮಿಕದ 'ಪಾಲಿ'ಗೆ ಒಳಜಗಳ ಶುರುವಾಗಿ ಅತಿರೇಕಕ್ಕೇರಿದ ಪ್ರಸಂಗಗಳೂ ಉಂಟು! ಆ ರಾತ್ರಿ ಮನೆ-ಮನೆಗಳಲ್ಲಿ, ಕಟ್ಟಿಗೆಗಳ ಕೆಂಡದಿ ಮಿಕದ ಮಾಂಸವನ್ನ ಹದವಾಗಿ ಸುಟ್ಟು, ಖಾರ, ಮಸಾಲೆ, ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಬೇಯಿಸಿ, ಬಿಸಿ ಜೋಳದ ರೊಟ್ಟಿಯೊಂದಿಗೆ ಕೊಬ್ಬಿದ, ಎಣ್ಣೆ-ಭರಿತ ಒಣಕೊಬ್ಬರಿಯಂತಹ ಮಿಕದ ಮಾಂಸದ ತುಂಡು ಸವಿಯುತ್ತಾ ತಡರಾತ್ರಿವರೆಗೂ ಬೇಟೆಯ ರೋಚಕತೆಯನ್ನು ರಸವತ್ತಾಗಿ ಮೆಲುಕು ಹಾಕುವುದರಲ್ಲಿ ಮಗ್ನರಾಗುತ್ತಿದ್ದರು! ಆ ದಿನ ಓಣಿಗಳಲ್ಲಿ, 'ಮಿಕದ ಸಾರಿನ' ವಿಶಿಷ್ಟ ಪರಿಮಳದ ಘಮ್ಮತ್ತೋ ಘಮ್ಮತ್ತು!!

ಈ ನಡುವೆ, ಶಾಲಾ ಓಣಿಯ ಹೊನ್ನ, ಮಂಜ ಅಣ್ಣ-ತಮ್ಮಂದಿರಿಬ್ಬರೂ ಮಿಕದ ಮಾಂಸದ ರುಚಿಗೆ ಸದಾ ಹಾತೊರೆವ ಬಯಕೆ ಹೊತ್ತು, ಪಾಲು ಸಿಕ್ಕಾಗಲೆಲ್ಲಾ ಮನೇಲಿ ಹೆಂಡ್ತೀರೊಂದಿಗೆ ಮಂಗಳಾರತಿ ಎತ್ತಿಸಿಕೊಂಡರೂ, ಛಲದಿ ಬಿಡದೆ ಘಮ್ಮತ್ತು ಮಾಡಿ, ಬಾಯ್ತುಂಬಾ ಎಲೆಯಡಿಕೆ ಹಾಕಿ ಬರೀ ಬಿಳಿ ಬನಿಯನ್, ಪಂಚೆ ಧರಿಸಿ ಹೆಗಲ ಮೇಲಿನ ಟವೆಲನ್ನ ಎರಡೂ ಕೈಗಳಿಂದ ಗತ್ತು-ಗೈರಿನಿಂದ ಆಚೀಚೆ ಎಳೆದಾಡುತ್ತಾ ಓಣೀಲೆಲ್ಲಾ ತಿರುಗಾಡಿ ಹಮ್ಮು-ಬಿಮ್ಮಿನಿಂದ ಬೀಗುತ್ತಿದ್ದರು. ಹಲವು ಬಾರಿ ಲಂಬಾಣಿಗರೊಂದಿಗೆ ಮಿಕದ ಬೇಟೆಗೆ ತೆರಳಿ ಅನುಭವವಿದ್ದರಿಂದ, ಬೇಟೆಯಾಡುವ ಚಪಲವೂ ತುಸು ಹೆಚ್ಚೇ ಇತ್ತು. ಇವರ ಸಾಲಿಗೆ ಆಗಾಗ್ಗೆ, ಅದೇ ಓಣಿಯ ಮಾಯಮ್ಮ ದೇವಸ್ಥಾನದ ಬಳಿಯ ಅಳಿಯ-ಮಾವಂದಿರಾದ ಫಕ್ಕೀರ, ನಾಗ ಮನೆಯ ಹೊರಗೆ ಮಿಕದ ಮಾಂಸದ ರುಚಿ ಬಾಯಿಚಪ್ಪರಿಸಿ ಸವಿಯುತ್ತಿದ್ದರು! ಆದರೆ, ಬೇಟೆಯ ಹುಚ್ಚು ಅಷ್ಟಾಗಿರಲಿಲ್ಲ.


© ನಾಗೇಶ್ ಒ. ಎಸ್.

ಚಳಿಗಾಲ ಕಳೆದು, ಅದೊಂದು ಕಡು ಬೇಸಿಗೆಯ ದಿನ. ಅದಾಗಲೇ, ಮಿಕದ ಬೇಟೆಯಾಡಿ ತುಂಬಾ ದಿನಗಳೇ ಕಳೆದಿತ್ತು. ಲಂಬಾಣಿ ಜನತೆ, ಕೃಷಿ ಕೆಲಸ ತುಸು ಬಿಡುವಿದ್ದರಿಂದ, ಬೇಟೆಯ ಮೋಜಿಗೆ ಎಲ್ಲಾ ಉಪಾಯ ಮಾಡಿ ಮರುದಿನ ಸಂಚು ಹೂಡಿದ ಸುದ್ದಿ ಕಾಳ್ಗಿಚ್ಚಿನಂತೆ ಊರೆಲ್ಲಾ ಹಬ್ಬಿತ್ತು. ರಾತ್ರೋರಾತ್ರಿ, ಎಲ್ಲಾ 'ಬೇಟೆ ಪ್ರಿಯರು' ತಮ್ಮ ಬಳಿ ಇರುವ ಸಕಲ ಶಸ್ತ್ರಗಳಿಂದ ಸುಸಜ್ಜಿತರಾಗತೊಡಗಿದ್ದರು. ಹಾಗೆನೇ, ಇತ್ತ ಹೊನ್ನ-ಮಂಜ ರಿಬ್ಬರೂ ಅತೀವ ಆಸಕ್ತಿಯಿಂದ ಭರ್ಜಿ, ಈಟಿ, ಗಟ್ಟಿ-ಮುಟ್ಟಾದ ಕೊಲ್ಲಾಪುರ ಕುರುಬರ ಚರ್ಮದ ಪಾದರಕ್ಷೆಗಳೆಲ್ಲವನ್ನು ಭರದಿಂದ ಸಿದ್ಧಗೊಳಿಸಿ, ಬೇಟೆ ಇಲ್ಲದೆ ಕಂಗೆಟ್ಟ ಮನಕೆ ಇನ್ನಿಲ್ಲದ ಉತ್ಸಾಹ ತುಂಬಿ ಆಗಸದಲ್ಲಿ ತೇಲುತ್ತಿದ್ದರು. ಆ ರಾತ್ರಿ, ಒಣಿಯಲಿ ಸಿಕ್ಕವರೆಲ್ಲರಿಗೂ ತಮ್ಮ ನಾಳೆಯ ಬೇಟೆಯ ಆರ್ಭಟವೋ ಆರ್ಭಟ! ಇವರ ಹುಚ್ಚು ಮನಸ್ಸಿನ ಹೋಯ್ದಾಟಕ್ಕೆ, ಕೆಲ ಹಿರಿಯರು ಬೇಟೆಗೆ ಹೋಗದಿರಲು; ಇನ್ನೂ ಕೆಲವರು, ಮನೆದೇವರು ಶ್ರೀ ಉಚ್ಚಂಗೆಮ್ಮ, ಶ್ರೀ ಮಾಯಮ್ಮ ದೇವತೆಯರಲ್ಲಿ ಆಯುಧಗಳೊಂದಿಗೆ ಪೂಜೆಗೈದು ದರ್ಶನ ಪಡೆದು ತೆರಳಲು ಸಲಹೆಯಿತ್ತರು. ಎಲ್ಲವನ್ನೂ ತುಸು ದಾಷ್ಟ್ರ್ಯದಿಂದಲೇ ಅಲಕ್ಷಿಸಿ, 'ನಾವು ಭಲೇ ಧೀರ ಬೇಟೆಗಾರರು! ಸಾಕಷ್ಟು ಬಾರಿ ಜಯಸಿದ್ದೇವೆ; ಇದೇ ಮೊದಲೇನಲ್ಲ, ನಾವು ದಿಟ್ಟರು, ಕಲಿವೀರರು!' ಎಂತೆಲ್ಲ ತೋರಿಕೆಯ ಹುಂಬ ಮಾತುಗಳನ್ನ ಸಲಹೆಯಿತ್ತವರಿಗೆ ಘಟೀರನೇ ಕಿಡಿಕಾರುತ್ತಿದ್ದರು. ಮೈಮನ ಅದಾಗಲೇ ಕಾಡಿನಲಿ ಅಲೆಯುವಂತಾಗಿತ್ತು! ರಾತ್ರಿಯಿಡೀ, ನಿದ್ದೆಯಲ್ಲೂ 'ಮಿಕದ ಬೇಟೆಯ' ನಾನಾ ವಿಧದ ಅವತಾರಗಳ ಕನಸೇ!! ಇಬ್ಬರಲ್ಲಿ, ಅಣ್ಣ ಹೊನ್ನ ಎತ್ತರದ, ಕಡು ಕಪ್ಪುಬಣ್ಣದ, ಒರಟು ಮುಖದ, ತುಸು ಭಂಡ ಧೈರ್ಯದ ಹಾಗೂ ಹುಂಬ ಮನಸಿನ, ದುಡುಕಿನ ವ್ಯಕ್ತಿತ್ವದ ಗಟ್ಟಿಗನಾಗಿದ್ದ! ಮಿಕದ ಬೇಟೆಯ ಮೋಜು ಭಲೇ ಇಷ್ಟವಾಗಿತ್ತು. ಯಾರಾದರೂ ಬೇಟೆಯ ಸೊಲ್ಲೆತ್ತಿದರೆ ಸಾಕು, ಚಡಪಡಿಸಿ ಸದಾ ಮುಂದೆ ನುಗ್ಗುತ್ತಿದ್ದ!

ಕಗ್ಗತ್ತಲು ಸರಿದು, ಚುಮುಚುಮು ಬೆಳಕು ಹರಿಯಿತು. ಗಡಿಬಿಡೀಲಿ ಎದ್ದ ಹೊನ್ನ, ಬೆಳಗಿನ ಸಂಧ್ಯಾವಂದನೆ ಮುಗಿಸಿ, ಮನೇಲಿ ಬಿಸಿ ರೊಟ್ಟಿ-ಪಲ್ಯ ಸವಿದು, ಕುತೂಹಲದಿ ಲಂಬಾಣಿಗರ ಹಟ್ಟಿಯ ಕರೆಗೆ ತವಕದಿ ಕಾಯುತ್ತಿದ್ದ. ಬೆಳಗಿನ ಜಾವ ಎಂಟು ಗಂಟೆ ಹೊತ್ತಿಗೆ, ಸುಮಾರು 25-30 ಜನರ ಬೇಟೆಯ




ತಂಡ ಆಯುಧಗಳಿಂದ ತಾಂಡಾದಂಚಿನ ಗುಡ್ಡದ ಮೂಲಕ ಸಾಲು ಸಾಲಾಗಿ ಉತ್ಸಾಹದಿ ಉಪಾಯಗಳನ್ನ ಹೆಣೆಯುತ್ತಾ, ಚರ್ಚಿಸುತ್ತಾ ಹೊರಟಿತು. ಮುಂದೆ ಬಲಾಢ್ಯ ನಿಪುಣರು; ಅಲ್ಲಲ್ಲಿ, ಸಾಧಾರಣ ಅನುಭವ ಇರುವವರು; ಮಧ್ಯೆ, ಮತ್ತೆ ಕೊನೆಯಲ್ಲಿ ಗಟ್ಟಿಗರು ಹಂಚಿಕೆಯಾಗಿ ಸಾಗುತ್ತಿತ್ತು ಬೇಟೆಗಾರರ ದಂಡು! ಹೀಗೆ, ದಾರಿ ಮಧ್ಯೆ ಸಿಕ್ಕ ಬೃಹತ್ ಅರಳಿ

ಮರದಡಿ ಕೊಂಚ ವಿಶ್ರಮಿಸಿ, 'ಮಿಕದ ಬೇಟೆಯ' ಜಾಣತನದ ಉಪಾಯಗಳನ್ನ ತಾಂಡಾದ ಹಿರಿಯ ಬೇಟೆಗಾರ - 'ಹಂಕ್ಯಾ ನಾಯ್ಕ್' ಎಲ್ಲರಿಗೂ ಸೂಕ್ಷ್ಮರೀತಿ ವಿವರವಾಗಿ ಮನದಟ್ಟು ಮಾಡಿಸಿದ. ಜೊತೆಗೆ, ಬಲಾಢ್ಯ ಮಿಕದ ನಡತೆ, ವರ್ತನೆ ಹಾಗೂ ಅದರ ಅಗಾಧ ಶಕ್ತಿಯ ಕುರಿತು ವಿವೇಚನೆಯ ಅರಿವು ಕೊಟ್ಟ. ಕೆಲವು ವಿಶಿಷ್ಟ ಧ್ವನಿಗಳು, ಹಾವಭಾವಗಳ ನಟನೆಯ ಮೂಲಕ ಅವುಗಳ ಅರ್ಥ ವಿವರಣೆಯೊಂದಿಗೆ, ಮಿಕದ ಸಧ್ಯದ ಮನಸ್ಥಿತಿ, ಇರುವಿಕೆ, ಸಿಟ್ಟು, ಶಕ್ತಿ ಇತ್ಯಾದಿ ಕುರಿತು ತಂಡದ ಇತರೆ ಸದಸ್ಯರಿಗೆ ಮಾಹಿತಿ ನೀಡಲು, ಪ್ರಾತ್ಯಕ್ಷಿಕೆ ನೀಡಿ, ಪೂರ್ವ ತಯಾರಿ ಮಾಡಿಕೊಳ್ಳಲಾಯಿತು. ಅಲ್ಲದೆ, 'ಬೇಟೆಯೆನ್ನುವುದು ಒಗ್ಗಟ್ಟಿನಲಿ ಹೋರಾಡುವುದೇ ಹೊರತು ಒಬ್ಬಂಟಿಗರಿಂದಲ್ಲ' ಎಂಬ ನೀತಿಯನ್ನ ಮನವರಿಕೆ ಮಾಡಿಸಿದ. ತಾಳ್ಮೆ, ಚತುರತೆ ಹಾಗೂ ಒಗ್ಗಟ್ಟಿನಿಂದ ಸುರಕ್ಷಿತವಾಗಿ ಧೈರ್ಯ, ಆತ್ಮವಿಶ್ವಾಸದಿ ಹೋರಾಡುವಂತೆ ಕರೆಕೊಟ್ಟ. ಎಲ್ಲರೂ ತಲೆದೂಗಿದರು. ಚರ್ಚೆಯಂತೆಯೇ, ಐದಾರು ಸದಸ್ಯರಿರುವ ಸುಮಾರು ಏಳೆಂಟು ತಂಡಗಳನ್ನು ಮಾಡಿ, ಪ್ರತಿ ತಂಡದಲ್ಲಿ ಎರಡರಿಂದ ಮೂರು ಜನ ಅನುಭವಿ ಬಲಾಢ್ಯ ಬೇಟೆಗಾರರು ಮುಂದಾಳತ್ವ ವಹಿಸಿಕೊಂಡು ತಂಡವನ್ನ ಮುನ್ನಡೆಸುವಂತೆ ಹಾಗೂ ಸಮಯಕ್ಕೆ ತಕ್ಕಂತೆ ಉಪಾಯದಿಂದ ಬೇಟೆಗೆ ಸನ್ನದ್ಧರಾಗುವಂತೆ ರಚನೆ ಮಾಡಲಾಯಿತು. ಬಳಿಕ, ಎಲ್ಲರೂ ಊರ ಅಧಿದೇವತೆ ಶ್ರೀ ದುರ್ಗಾದೇವಿ ಹಾಗೂ ತಾಂಡಾದ ಸಂತ ಶ್ರೀ ಸೇವಾಲಾಲ್ ಮನದಿ ನೆನೆದು, ಪ್ರಾರ್ಥಿಸಿ, ತಂಡದ ಜವಾಬ್ದಾರಿಯರಿತು ಬೆಟ್ಟದ ಕಣಿವೆಗಳಡಿ ಮಿಕಗಳ ಹೆಜ್ಜೆ ಗುರುತುಗಳ ಜಾಡು ಹಿಡಿದು ಅವುಗಳ ಆವಾಸದತ್ತ ವಾಳತಾಂಡಾದ ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ ಜೋರಾಗಿ ಅರಚುತ್ತ, ಕೂಗಾಡುತ್ತಾ ಮಿಕಗಳನ್ನ ದೊಂಬಿಯೆಬ್ಬಿಸ ತೊಡಗಿದರು. ಅಲ್ಲಲ್ಲಿ ಚದುರಿದಂತೆ, ತಂಡಗಳು ಆಯುಧಗಳಿಂದ ಪೊದೆಗಳನ್ನ ತಿವಿಯುತ್ತಾ, ಭಯಂಕರ ಸದ್ದುಗೈಯುತ್ತಾ, ಪ್ರಾಣಿಗಳಂತೆಯೇ ಒದರುತ್ತಾ, ಒಗ್ಗಟ್ಟಿನಲಿ ಮೂರು ನಾಲ್ಕು ಬೆಟ್ಟಗಳನ್ನ ಅಲೆದು, ಬಿಸಿಲ ತಾಪಕ್ಕೆ ಬಾಯಾರಿಸಿ, ಬಳಲತೊಡಗಿದರು. ಅಲ್ಲಲ್ಲಿ ಕೆರೆ, ತೋಡು, ಕಲ್ಲೊರತೆಗಳಲಿ ಸಿಕ್ಕ




ಹನಿ ನೀರ ಹೀರಿ, ಬಾಯಾರಿಕೆ ನೀಗಿಸಿಕೊಂಡು, ಬರ್ಸಿದ್ದಪ್ಪನ ಬೆಟ್ಟದ ತಳಭಾಗದಿ ಪೊದೆಯೊಂದರಲಿ ಧುತ್ತನೆ ಎದುರಾದ 'ಮಿಕರಾಯ'ನ ಕಂಡು ಬೆಚ್ಚಿ, ಕ್ಷಣಾರ್ಧದಲ್ಲೇ ಎಚ್ಚೆತ್ತುಕೊಂಡರು. ಕಾಡೆಲ್ಲ ಅಲೆದು, ಕೊಬ್ಬಿ ಸೊಕ್ಕಿದ ಮಿಕರಾಯ, ಶರವೇಗದಿ ಛಂಗನೆ ಪೊದೆಯಿಂದ ಜಿಗಿದು ಮತ್ತೊಬ್ಬ ಹಿರಿಯ ಬೇಟೆಗಾರ ಠಾಕ್ರು ನಾಯ್ಕನ ಪಕ್ಕದಲ್ಲಿಯೇ ಎಗರಿದ್ದರಿಂದ, ಅವನ ಭರ್ಜಿಯ ಮೊನಚಾದ ತುದಿ ಮಿಕರಾಯನ ಎಡತೊಡೆಗೆ ತಾಗಿ ತುಸು ರಕ್ತ ಸೋರಿ, ಕಾಲ್ಬೇನೆಯಲ್ಲೇ ಎರಡು-ಮೂರು ಬೆಟ್ಟಗಳನ್ನು ಅಲೆದಾಡಿಸಿ, ಬೇಟೆಗಾರರ ಸರ್ವ ಶಕ್ತಿಯನ್ನೂ ಕುಂದಿಸಿ, ಮೆತ್ತಗೆ ಮಾಡಿ ಬಳಲಿಸಿಬಿಟ್ಟಿತ್ತು.

ಈ ನಡುವೆ, ಏಳೆಂಟು ಮಂದಿ ತಂಡದ ಹೊಸ ಸದಸ್ಯರು ಕೈಕಾಲು ಬೇನೆಗೊಂಡು ಸುಸ್ತಾಗಿ ಬೇಸತ್ತಿದ್ದರು. ಸಮಯ ಅದಾಗಲೇ ಮಧ್ಯಾಹ್ನ ಒಂದು ಗಂಟೆ ಮೀರಿತ್ತು. ಮುಖ್ಯಸ್ಥ ಹಂಕ್ರ್ಯಾ ನಾಯ್ಕ್, 'ಮಿಕ ಈಗಾಗಲೇ ಭಯಂಕರ ಓಡಿ, ದಣಿದಿದೆ; ಬಿಡದೆ, ಇನ್ನ ಸ್ವಲ್ಪ ಬೆನ್ನಟ್ಟಿದರೆ ಬೇಟೆ ನಿಶ್ಚಿತ' ಎಂದು ಎಲ್ಲರನ್ನೂ ಹುರಿದುಂಬಿಸುತ್ತಾ, ಆಯುಧಗಳ ಸಪ್ಪಳದಿ 'ಊ...ಹೂಂ... ಊ...ಹೂಂ.... ಹೇ... ಹೇಯ್, ಕಾಡ್ ಬೇಟೆ ಐಸಾ; ಮಿಕ ಬೇಟೆ ಐಸಾ', ಎಂದು ಜೋರಾಗಿ ಪುನಃ ಆರ್ಭಟಿಸ ತೊಡಗಿದರು. ಅದಾಗಲೇ, ಎಡತೊಡೆ ನೋವಿಂದ ಬಳಲಿ ದಣಿದ, ಕೊಂಚ ವಿಶ್ರಮಿಸುತ್ತಿದ್ದ ಪೊದೆಯಲ್ಲಡಗಿ ಕುಳಿತ ಮಿಕರಾಯ ಭಯಂಕರ ಕ್ರೋಧದಿ ಗೂರತೊಡಗಿದ! ಕೂಡಲೇ ಎಚ್ಚೆತ್ತ, ಎಲ್ಲರೂ ಸುತ್ತಮುತ್ತಲ ಸಿಕ್ಕಸಿಕ್ಕ ಮರಗಳನ್ನೇರಿ ಅದರ ಹೊರಬರುವಿಕೆಯ ನಿರೀಕ್ಷೆಯಲ್ಲಿ ಕಣ್ಣು ಮಿಟುಕಿಸದೆ ತದೇಕಚಿತ್ತದಿಂದ ಕಾಯತೊಡಗಿದರು.




ಇದ್ದಕ್ಕಿದ್ದಂತೆ ಅದೇನನ್ನಿಸಿತೋ ಗೊತ್ತಿಲ್ಲ. ಈ ಹೊನ್ನ ಭಲೇ ಭಂಡ ಧೈರ್ಯ ಮಾಡಿ, ತಮ್ಮ ಮಂಜ ಹಾಗೂ ಹಂಕ್ರ್ಯಾ ನಾಯ್ಕರ ಧ್ವನಿ, ಹಾವಭಾವದ ಸೂಚನೆಯನ್ನೂ ಲೆಕ್ಕಿಸದೆ, ನೇರ ಮರದಿಂದಿಳಿದು ಭರ್ಜಿ ಹಿಡಿದು, ಮಿಕರಾಯನ ಪೊದೆಯತ್ತ ವೀರಾವೇಶದಿ ಓಡಿ, ಅದರ ಕಾಲಿಗೆ ತಿವಿದೇ ಬಿಟ್ಟ! ಬಿರುಬಿಸಿಲಲಿ ಓಡಿ ಬಳಲಿ ಬೆಂಡಾದ ಮಿಕರಾಯ ಹೊನ್ನನ ಚೇಷ್ಟೆಗೆ ಕೆರಳಿ ಏಕಾಏಕಿ ಅವನ ಮೇಲೆರಗಿತು. ಪ್ರತಿಭಟನೆಯ ಧೈರ್ಯವೂ ತೋರದೆ, ಹೊನ್ನ ಅದರ ಆರ್ಭಟಕ್ಕೆ ತತ್ತರಿಸಿ ಹೋಗಿದ್ದ. ಕ್ಷಣಾರ್ಧದಲಿ ಅಡಗಿಸಿದ ತನ್ನೆಲ್ಲಾ ಶಕ್ತಿ ಒಗ್ಗೂಡಿಸಿ ಚಿರತೆಯಂತೆ ಎಗರಿದ ಮಿಕರಾಯ, ಕಣ್ಣೆಲ್ಲ ಕೆಂಪಾಗಿ, ಕೋಪದಿಂದ ಹರಿತವಾದ ತನ್ನೆರಡೂ ಕೋರೆಗಳಿಂದ ಹೊನ್ನನ ಕುತ್ತಿಗೆಯ ಹಿಂಭಾಗ ಹಾಗೂ ಬೆನ್ನ ಭಾಗವನ್ನು ಅಕ್ಷರಶಃ ಇರಿದು ರಕ್ತದ ಮಡುವಿನಲ್ಲಿ ಬೀಳಿಸಿತ್ತು!! ಯಾರೊಬ್ಬರೂ ಆ ಕ್ಷಣಕ್ಕೆ ಧೈರ್ಯ ತೋರದೆ, ಬೆಪ್ಪು-ಪೆಚ್ಚು ಮೋರೆ ಹಾಕಿ, ಮೂಕವಿಸ್ಮಿತರಾಗಿ ಏರಿದ್ದ ಮರವನ್ನಿಳಿಯದಾದರು. ಆದರೆ, ಮಂಜ ರೋಷಾಗ್ನಿಯಿಂದ ಜಿಗಿದು, ಅಣ್ಣನ ನೆರವಿಗೆ ಧಾವಿಸಿದ. ಆ ಕೂಡಲೇ, ದಾಳಿಯ ಭೀಕರತೆಯ ಅರಿವಾಗಿ ಹಂಕ್ರ್ಯಾ ನಾಯ್ಕ್, ಠಾಕ್ರ್ಯಾ ನಾಯ್ಕ್ ಎಲ್ಲರೂ ಸಂಜ್ಞೆಗಳ ಮೂಲಕ ಆಕ್ರಮಿಸುವುದಾಗಿ ಈಟಿ, ಭರ್ಜಿಗಳೊಂದಿಗೆ ದಿಢೀರನೆ ಮಿಕರಾಯನ



ಹೊಟ್ಟೆ, ಬೆನ್ನಿಗೆ ಇರಿಯುವುದರ ಮೂಲಕ ಅದನ್ನ ನೆಲಕ್ಕುರುಳಿಸಿದ್ದರು! ರಕ್ತ ಒಸರುತ್ತ, ವಿಪರೀತ ಬೇನೆಯಿಂದ ನರಳಿ, ಜೀವ ಸಂಕಟಕ್ಕೆ ಇಡೀ ಕಾಡೇ ಭಯ-ಭೀತಿಗೊಳ್ಳುವ ರೀತಿ ಅರಚಾಡುತ್ತಿದ್ದ 'ಮಿಕ' ಒಂದೆಡೆಯಾದರೆ; ಇತ್ತ, ಹೊನ್ನ ಜೀವನ್ಮರಣದ ಮಧ್ಯೆ ಸಿಲುಕಿದ್ದ! ಈ ಎರಡೂ ಘಟನೆಗಳಿಂದ ಬೇಟೆಗೆ ತೆರಳಿದ ಇಡೀ ಸಮೂಹವಲಯದಲ್ಲಿ ಹಿಂದೆಂದೂ ಅನುಭವಕ್ಕೆರಗದ ಭಾವೋದ್ವೇಗ ಉಕ್ಕಿ, ಜೀವದ ಅಮೂಲ್ಯತೆಗೆ ತಲೆಬಾಗಿ ಹೃದಯದಾಳದಿಂದ ಕಣ್ಣುಗಳು ತೇವಗೊಂಡಿದ್ದವು! ಆ ಕ್ಷಣ, ಬೇಟೆಯ ಕ್ರೂರತೆ ತಂದೊಡ್ಡುವ ಅನಾಹುತಗಳ ಅರಿವು ಒಳಗಣ್ಣ ತೆರೆಸಿತ್ತು.




ಇತ್ತ, ಹೊನ್ನನ ಸ್ಥಿತಿ ತೀರಾ ಗಂಭೀರತೆಯಿಂದ ಕೂಡಿದ್ದು, ರಕ್ತಸ್ರಾವ ಹಾಗೂ ತೀವ್ರ ಬೇನೆಯಿಂದ ನರಳಿ ಮೂರ್ಛೆ ಹೋಗಿದ್ದ. ಅಣ್ಣನ ಸ್ಥಿತಿಗೆ ಮುಮ್ಮಲ ಮರಗಿ, ಮಂಜ ತಬ್ಬಿ ಗೋಗರೆದು ಅಳತೊಡಗಿದ. ಕೂಡಲೇ ಕಾಡೌಷಧಿಯ ಬಲ್ಲ ಹಂಕ್ಯಾನಾಯ್ಕ್ ಅಲ್ಲಿಯೇ ಸುತ್ತಮುತ್ತ ಸಿಕ್ಕ ಹತ್ತಾರು ಹಸಿರು ಸೊಪ್ಪುಗಳ ಹೆಕ್ಕಿ, ಒಟ್ಟುಗೂಡಿಸಿ ಜಜ್ಜಿ ರಸಹಿಂಡಿ ಗಾಯದ ಭಾಗಕ್ಕೆ ಹಚ್ಚಿ ನೇವರಿಸಲು ಬೇನೆಯ ತೀವ್ರತೆ ತಗ್ಗಿ ನಿಧಾನವಾಗಿ ಹೊನ್ನ ಮೂರ್ಛೆಯಿಂದ ಚೇತರಿಸಿಕೊಂಡು ಕೈ-ಕಾಲು ಆಡಿಸತೊಡಗಿದ. ಸುತ್ತ ಗದ್ದೆ ಕೆಲಸಕ್ಕೆ ತೆರಳಿದ ಕೃಷಿಕರು, ಬೇಟೆಗಾರರು, ನೆರೆದವರೆಲ್ಲರೂ ಹಂಕ್ಯಾ ನಾಯ್ಕ್ ರ ಗಿಡಮೂಲಿಕೆಯ ಕೈಚಳಕಕ್ಕೆ ತಲೆಬಾಗಿ ಎರಡೂ ಕೈ ಜೋಡಿಸಿದರು. ಆ ಹೊತ್ತಿಗಾಗಲೇ, ಹೊನ್ನ ಮಿಕದ ದಾಳಿಗೆ ತುತ್ತಾಗಿ ಸಾವು-ಬದುಕಿನ ಮಧ್ಯೆ ನರಳುತ್ತಿರುವ ಹಾಗೂ ಬದುಕುಳಿವ ಅನುಮಾನ ಊರೆಲ್ಲಾ ಸುದ್ದಿ ಆಗಿತ್ತು. ತಡಮಾಡದೆ, ಆತನನ್ನು ಆಸ್ಪತ್ರೆಗೆ ಸೇರಿಸಿ, ಸರಿಯಾದ ಸಮಯಕ್ಕೆ ಕುತ್ತಿಗೆ ಹಾಗೂ ಬೆನ್ನ ಭಾಗದಲ್ಲಿನ ಗಾಯಗಳಿಗೆ ಎಂಟರಿಂದ ಹತ್ತು ಹೊಲಿಗೆ ಹಾಕಿಸಿ, ಚಿಕಿತ್ಸೆ ನೀಡುವುದರ ಮೂಲಕ ಪ್ರಾಣಾಪಾಯದಿಂದ ಪಾರು ಮಾಡಲಾಯಿತು. ಹೊನ್ನ ಸಂಪೂರ್ಣ ಚೇತರಿಸಿಕೊಳ್ಳಲು ತಿಂಗಳುಗಳೇ ಹಿಡಿಯಿತು. ನಿಜಕ್ಕೂ ಆ ದಿನಗಳು, 'ಬದುಕಿದೆಯಾ ಬಡಜೀವವೆಂಬಂತೆ' ಆತನಿಗೆ ಮರುಜನ್ಮ ಪಡೆದ ಅನುಭವವೇ ಆಗಿತ್ತು! ಇಡೀ ಘಟನೆಗೆ ಕಂಬನಿಮಿಡಿದ ಊರ ಜನತೆ ಕಾಡು, ಪಶು ಪಕ್ಷಿಗಳ ಮಹತ್ವ, ಜೀವದ ಬೆಲೆಯರಿತು ಅಂದಿನಿಂದಲೇ, ಊರಲ್ಲಿ 'ಮಿಕದ ಬೇಟೆ' ಮಂಕು ಕವಿದಂತಾಗಿ ಬೇಟೆಯೆಂಬ ಕ್ರೂರತೆಗೆ ಕೊನೆಯ ದಿನಗಳಾಗಿತ್ತು!! ಭೂ ಮಾತೆ ಮಡಿಲಲ್ಲಿ, ಸಕಲ ಜೀವ-ಸಂಕುಲವೂ ಬದುಕು ಕಟ್ಟಿಕೊಳ್ಳುವ ಸ್ವಾತಂತ್ರ್ಯವಿರುವಾಗ, ಮನುಷ್ಯ ಮಾತ್ರ ತನ್ನ ಮೂಗಿನ ನೇರಕ್ಕೇ ಎಲ್ಲವೂ ಸಲ್ಲಬೇಕು; ಈ ಭೂಮಿಯಲ್ಲಡಗಿರುವ ಸಂಪತ್ತೆಲ್ಲ ತನ್ನ ಅನುಕೂಲಕ್ಕೇ ಹಾಗೂ ತನ್ನಿಚ್ಛೆಯೇ ಸರ್ವ ಶ್ರೇಷ್ಠ; ಆ ಸಂತಸಕ್ಕೆ ಎಲ್ಲವನ್ನೂ ಬದಲಿಸಬಲ್ಲೆ; ನೀರು, ಗಾಳಿ, ಮಣ್ಣು, ಪಶು-ಪಕ್ಷಿ, ಗಿಡ-ಮರ, ಹಾಗೂ ಅರಣ್ಯವನ್ನೆಲ್ಲ




ಕಬಳಿಸಬಲ್ಲೆ, ನಾಶಪಡಿಸಬಲ್ಲೆ; ಮಲಿನಗೊಳಿಸಬಲ್ಲೆ; ಜೊತೆಗೆ, ಹೊಸ ಲೋಕ ಸೃಷ್ಟಿಸಬಲ್ಲೆಯೆಂಬ ಹುಂಬತನದ ಅವೈಜ್ಞಾನಿಕ, ಮೂರ್ಖತನದ ವಿಚಾರಗಳಿಂದ ಪರಿಸರಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಪ್ರವೃತ್ತಿ ರೂಢಿಸಿಕೊಂಡಿದ್ದಾನೆ. ಈ ಮನಸ್ಥಿತಿ ಬದಲಾಗಬೇಕು. ಮನುಷ್ಯನ ಉಸಿರು ಗಿಡ-ಮರಗಳಲ್ಲಿದೆ. ಅಂಥಹ ಸಸ್ಯವರ್ಗವನ್ನು ನಾವೆಲ್ಲ ಎಷ್ಟು ನೆಟ್ಟು, ಪೋಷಿಸಿ, ಆರೈಕೆ ಮಾಡಿದ್ದೇವೆ? ಸಸ್ಯ-ಸಂಪತ್ತು ಹೆಚ್ಚಿದಷ್ಟೂ ಪರಿಶುದ್ಧ ಆಮ್ಲಜನಕ, ಕಾಲಕ್ಕೆ ತಕ್ಕ ಮಳೆ, ಸಮೃದ್ಧ ಬೆಳೆ, ಸಮತೋಲಿತ ಜೀವ-ಸಂಕುಲ ಮತ್ತು ಆರೋಗ್ಯ ಎಲ್ಲವೂ ತಂತಾನೇ ಸುಸ್ಥಿರವಾಗಿ ಭದ್ರಗೊಳ್ಳುತ್ತೆ. ಭೂಮಿ ಹಚ್ಚ-ಹಸಿರಿನಿಂದ ಕಂಗೊಳಿಸುವಂತಾಗಬೇಕು. ಮತ್ತೆ, ಪಕ್ಷಿಗಳ ಚಿಲಿಪಿಲಿ ಕಲರವ, ಪ್ರಾಣಿಗಳ ಒಕ್ಕೊರಲ ಒಡನಾಟ, ಪ್ರಾಕೃತಿಕ ಸಮತೋಲನ ಬೇರೂರುವಂತಾಗಬೇಕು. ಬುದ್ಧಿಜೀವಿ ಮನುಷ್ಯನಲ್ಲಿ ಕಾಡು, ಪಶು-ಪಕ್ಷಿಗಳ ಒಡನಾಟದಿ ಪರಿಶುದ್ಧ ಭಾವಗಳ ಸಂಪ್ರೀತಿ ಒಡಮೂಡಬೇಕು.




**ಲೇಖನ: ಡಾ. ಚಂದ್ರಪ್ಪ ಎಚ್.**

ಚಿತ್ರದುರ್ಗ ಜಿಲ್ಲೆ




# ಕಾನನದ ಬೆಡಗಿ ಸೀತಾಳೆ ಬಗ್ಗೆ ಗೊತ್ತಾ?

ಮಳೆಗಾಲದಲ್ಲಿ ಮಲೆನಾಡಿನ ಹಸಿರ ಸಿರಿಯ ನಡುವೆ ಸಾಗುತ್ತಿದ್ದರೆ ಸಾಕು ಮರಗಳ ಮೇಲೆ ಚಾಚಿ ನಿಂತಿರುವ ಬಿಳಿ-ನೇರಳೆ ಅಥವಾ ಬಿಳಿ-ಕಂದು ಬಣ್ಣಗಳ ಮಿಶ್ರಿತ ಹೂ ಗೊಂಚಲಿನ ಮೋಹಕ ತಾರೆ ನೋಡುಗರಿಗೆ ಬಹು ಮುದ ನೀಡುತ್ತಾಳೆ.

ಅವಳನ್ನು ನೋಡಿದ ಕ್ಷಣ ವಾವ್ಹ್ ಎಂದು ಉದ್ಗರಿಸದವರು ಪ್ರಕೃತಿ ಪ್ರಿಯರಾಗಲು ಸಾಧ್ಯವೇ ಇಲ್ಲ. ಒಂದು ಕ್ಷಣ ಅಲ್ಲೇ ನಿಂತುಬಿಡುವುದಂತೂ ಖಂಡಿತ. ಮರದ ತುಂಬೆಲ್ಲ ಇಷ್ಟು ಅಚ್ಚುಕಟ್ಟಾಗಿ ಹೂವಿನ ಮಾಲೆ ಪೋಣಿಸಿಟ್ಟವರು ಯಾರು? ಇದು ನಿಸರ್ಗ ಲೀಲೆಯೋ ಅಥವಾ ಯಾರಾದರೂ ಹೂವಿನ ಮಾಲೆಗಳನ್ನು ಕಟ್ಟಿ ನೇತು ಹಾಕಿದ್ದಾರೋ ಎಂದು ಒಂದು ಘಳಿಗೆ ತಬ್ಬಿಬ್ಬಾದರೂ ಅಚ್ಚರಿಯೇನಿಲ್ಲ.

ಮರಬಳ್ಳಿ, ಮರಬಾಳೆ, ಸೀತಾ ದಂಡೆ ಎಂಬೆಲ್ಲ ನಾಮಾಂಕಿತಗೊಂಡ ಕಾನನದ ಬೆಡಗಿ. ಅಷ್ಟು ನಾಜೂಕಾದ ವಿನ್ಯಾಸದ ಹೂ ಈ ಸೀತಾಳೆ. ಪ್ರಕೃತಿ ಈ ಹೂವನ್ನು ಸೃಷ್ಟಿ ಮಾಡುವಾಗ ಸ್ವಲ್ಪ ಜಾಸ್ತಿಯೇ ಸಮಯ ತೆಗೆದುಕೊಂಡಿತೇನೋ ಅನಿಸುತ್ತದೆ. ಬಣ್ಣದಲ್ಲೂ ಸಹ ಹೆಂಗಳೆಯರ ಬಹು ಪ್ರೀತಿಯ ತಿಳಿ ಗುಲಾಬಿ ವರ್ಣ.

ಬಳುಕುವ ಬಳ್ಳಿ ಈ ಸೀತಾಳೆ, ಮಳೆಯ ನೀರಿನ ಸಿಂಚನವಾಗುತ್ತಿದ್ದಂತೆ ತನ್ನ ಇರುವಿಕೆಯನ್ನು ತೋರಿಸುತ್ತಾಳೆ. ಸಾಲದೆನಿಸಿದರೆ ತನ್ನ ಸಖಿಯರನ್ನೆಲ್ಲಾ ಒಗ್ಗೂಡಿಸಿಕೊಂಡು ವೈಯ್ಯಾರ ಬೀರುತ್ತಾಳೆ. ಸಾಮಾನ್ಯವಾಗಿ ಒಂದೊಂದು ಕಡೆ ಒಂದೊಂದು ಹೆಸರಿನಿಂದ ಕರೆಸಿಕೊಂಡರೂ ಈಕೆ ಮುಂಗಾರಿನ ಬೆಡಗಿ.

ಮುಂಗಾರಿನ ಆರಂಭದಲ್ಲಿಯೇ ಮರಗಳ ಮೇಲೆ ಕಣ್ಣು ಹಾಯಿಸಿದರೆ ನಗುನಗುತ್ತಾ ಕುಳಿತಿರುವ ಈಕೆ ಅಲ್ಲಿಂದಲೇ ಹಾಯ್ ಎಂದು ಕಣ್ಣು ಮಿಟುಕಿಸುತ್ತಾಳೆ. ಈ ಸೀತಾಳೆ ಸಸ್ಯದ ಕಾಂಡ ಮತ್ತು ಎಲೆ ಮೇಲ್ನೋಟಕ್ಕೆ ಒಂದೇ ತರಹ ಎಲೆಯಂತೆಯೇ ಕಾಣಿಸುತ್ತದೆ. ಮರದ ಕಾಂಡಕ್ಕೆ ಬೇರುಗಳಿಂದ ಕಚ್ಚಿಕೊಂಡು ನಿಂತು ತೊಗಟೆಯನ್ನು ತನ್ನ ಬೆಳವಣಿಗೆಗೆ ಆಸರೆಯಾಗಿ ಬಳಸಿಕೊಂಡು ಬೆಳೆಯುವ ಪರಾವಲಂಬಿ ಈಕೆ!




ಈ ಸೀತಾಳೆಯ ದಂಡೆಗಳು ಗೊಂಚಲು ಗೊಂಚಲಾಗಿ ಗಿಡಕ್ಕೆ ಇಳಿಮುಖವಾಗಿ ಜೋತು ಬೀಳುತ್ತವೆ. ಒಂದೊಂದು ದಂಡೆಯಲ್ಲಿ ನೂರಾರು ಹೂವುಗಳು ಮುತ್ತು ಪೋಣಿಸಿದಂತೆ ನಿಂತು ಸೋಜಿಗವನ್ನೇ ಸೃಷ್ಟಿಸುತ್ತವೆ. ಇವುಗಳಲ್ಲಿ ಎರಡು ಪ್ರಭೇದಗಳನ್ನು ನಾವು ಕಾಣುತ್ತೇವೆ. ಒಂದರಲ್ಲಿ ಹೂ ಒತ್ತೊತ್ತಾಗಿ ಪೋಣಿಸಲ್ಪಟ್ಟರೆ, ಇನ್ನೊಂದರಲ್ಲಿ ದೂರ ದೂರ ಪೋಣಿಸಲ್ಪಟ್ಟಂತೆ ಇರುತ್ತದೆ. ಇದರ ಮೂಲಕ ಗಂಡು ಮತ್ತು ಹೆಣ್ಣು ಹೂಗಳೆಂದು ವಿಂಗಡಿಸುತ್ತಾರೆ.

ಈ ಕಾನನದ ಬೆಡಗಿಗೆ ಸೀತಾಳೆ ಎಂಬ ಹೆಸರು ಬಂದಿರುವುದರ ಬಗ್ಗೆ ಕಥೆಯೂ ಕೂಡ ಇದೆ. ರಾಮಾಯಣದ ಕಾಲದಲ್ಲಿ ಸೀತೆ ಮತ್ತು ರಾಮ ವನದಲ್ಲಿ ಸಂಚಾರ ಮಾಡುತ್ತಿರುವಾಗ ಸೀತೆಗೆ ಈ ಹೂವು ಆಕರ್ಷಿಸಿತಂತೆ. ಮಡದಿಯ ಮನದ ಬಯಕೆ ಈಡೇರಿಸಲು ರಾಮ ಆ ಹೂವನ್ನು ತಂದು ಅವಳ ಮುಡಿಗೇರಿಸಿದ್ದ. ಹಾಗಾಗಿ ಸೀತೆಯ ಮಡಿಗೇರಿದ ವನಸುಮ ಸೀತಾಳೆಯಾಗಿಯೂ, ಸೀತಾದಂಡೆಯಾಗಿಯೂ ಕಥೆಯಾದಳು.

**ಲೇಖನ: ಮನೋಜ್ ದೊಡವಾಡ**

**ಧಾರವಾಡ ಜಿಲ್ಲೆ**




# ಅದೊಂದು ಬೇರೆಯದೇ ಅನುಭೂತಿ...

**ಮುಂದುವರಿದ ಭಾಗ...**

ಬೆಳಿಗ್ಗೆ ಆರು ಗಂಟೆಗೇ ಗಂಟುಮೂಟೆ ಕಟ್ಟಿದ ಪ್ರವಾಸೀ ತಂಡ, ಎಂಟೂವರೆಗೆಲ್ಲ ಮುತ್ತೋಡಿ ಅರಣ್ಯಪ್ರದೇಶವನ್ನು ಪ್ರವೇಶಿಸಿತು. ಮುಗಿಲೆತ್ತರದ ಮರಗಳಿಂದ ಥಿಪ್ ಥಿಪ್ ಎಂದು ಬೀಳುತ್ತಿದ್ದ ಇಬ್ಬನಿಯ ಹನಿಗಳು ಆಗಷ್ಟೇ ಹರಡಿಕೊಳ್ಳುತ್ತಿದ್ದ ತೆಳ್ಳನೆಯ ಬಿಸಿಲಿಗೆ ಹೌದೋ-ಅಲ್ಲವೋ ಎಂಬಂತೆ ಹಬೆಯಾಡುತ್ತಾ ಆವಿಯಾಗಲು ಅನುವಾಗುತಿತ್ತು. ಈ ಹಿಂದೆಯೇ ನಿಗದಿಯಾಗಿದ್ದಂತೆ ಅರಣ್ಯ ಇಲಾಖೆಯ ಸಫಾರಿ ಜೀಪುಗಳು ಈ ತಂಡವನ್ನು ಕಾಡಿನ ಕೋರ್ ಏರಿಯಾಕ್ಕೆ ಕರೆದೊಯ್ಯಲು ಸಿದ್ಧವಾಗಿ ನಿಂತಿದ್ದವು. ಅರಣ್ಯ ಇಲಾಖೆಯವರೇ ಬೆಳಗಿನ ಉಪಾಹಾರದ ವ್ಯವಸ್ಥೆ ಮಾಡಿದ್ದರು. ಲಗುಬಗೆಯಿಂದ ಕಾಫಿ, ತಿಂಡಿ ಮುಗಿಸಿಕೊಂಡವರಿಗೆ ನೇರವಾಗಿ ಆನೆ, ಕಾಟಿ, ಜಿಂಕೆ, ಕಡವೆ, ಹುಲಿ, ಕಾಡುನಾಯಿ, ನವಿಲು, ಕೆಂಜಳಿಲು, ಕಾಳಿಂಗಸರ್ಪ ಮುಂತಾದವನ್ನು ನೋಡುವ ಕಾತರ ಹಾಗೂ ಸಡಗರ. ಅಗತ್ಯ ಮಾರ್ಗಸೂಚಿಗಳನ್ನು ನೀಡಿದ ನಂತರ ವಾಹನಗಳು ನಿಧಾನವಾಗಿ ಕಾಡಿನೊಳಕ್ಕೆ ಚಲಿಸಲಾರಂಭಿಸಿದವು.


ಸುಮಾರು ಎರಡು ಗಂಟೆಗಳ ತಿರುಗಾಟದಲ್ಲಿ ಹಲವಾರು ಪ್ರಾಣಿಗಳ, ಅಪೂರ್ವ ತಾಣಗಳ ಎದುರುವಿಕೆಯ ನಂತರ ಸಫಾರಿ ವಾಹನಗಳು ಸಂಚರಿಸಲೆಂದೇ ನಿಗದಿಯಾಗಿದ್ದ ಹಾದಿಯ ಬದಿಯಲ್ಲಿದ್ದ ಪೊದೆಯ ಪಕ್ಕದಲ್ಲಿ ನಿಂತೇ ವಿಶ್ರಮಿಸುತ್ತಿದ್ದ ಆರಡಿಗೂ ಎತ್ತರದ ಭುಜ ಹೊಂದಿದ್ದ ಹಾಗೂ ಕರಿಶಿಲೆಯನ್ನೇ ಕಡೆದಿಟ್ಟಂತ್ತಿದ್ದ ಬೃಹತ್ಗಾತ್ರದ ಕಾಡುಕೋಣವೊಂದು ದಾರಿಗಡ್ಡವಾಗಿ ನಿಂತು, ತನ್ನ ತಲೆಯನ್ನು ತಗ್ಗಿಸಿ, ಅಗಲವಾದ ಹೊಳ್ಳೆಯಿಂದ ಬುಸಬುಸನೆ ಬಿಡುತ್ತಿದ್ದ ಉಸಿರಿಗೆ ನೆಲದಲ್ಲಿದ್ದ ಧೂಳು ಚಿಮ್ಮುತ್ತಿತ್ತು. ವಿಶಾಲವಾಗಿ ಎರಡೂ ಬದಿಗೆ ಪ್ರಭಾವಳಿಯಂತೆ ವಿಜೃಂಭಿಸುತ್ತಾ ಥಳಥಳಿಸುತ್ತಿದ್ದ ಬಿಳಿತುದಿಯ ಕಪ್ಪು ಕೋಡುಗಳನ್ನು ಎಲ್ಲದಕ್ಕಿಂತ ಮುಂದಿದ್ದ ಸಫಾರಿ ವಾಹನದ ಮುಂದಿನ ಬಂಪರ್‌ಗೆ ಒದೆಕೊಟ್ಟು ತನ್ನ ಪ್ರತಿರೋಧ ತೋರಹತ್ತಿತು. ವಾಹನದೊಳಗಿದ್ದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಗಾಬರಿ ಗಲಿಬಿಲಿಯಿಂದ ಗದ್ದಲಮಾಡತೊಡಗಿದರು. ಇಲಾಖೆಯ

ನೌಕರನೇ ಆಗಿದ್ದ ವಾಹನ ಚಾಲಕ, ಎಂಜಿನ್ ಅನ್ನು ಆಫ್ ಮಾಡಿ, ಹಿಂದಕ್ಕೆ ತಿರುಗಿ, "ಯಾರೂ ಗದ್ದಲ ಮಾಡಬೇಡಿ, ಇದು ಸ್ವಲ್ಪ ತುಂಟಾಟದ ಕೋಣ, ಸ್ವಲ್ಪ ಹೊತ್ತು ತಂಟೆ ಮಾಡಿ ಅದರ ಪಾಡಿಗೆ ಅದು ಹೊರಟುಹೋಗುತ್ತೆ, ಅಲ್ಲಿಯವರೆಗೆ ಅದರ ಚಲನವಲನಗಳನ್ನು ನಿಶ್ಯಬ್ದವಾಗಿ ಗಮನಿಸುತ್ತಿರಿ. ಇಂಥಾ ಸಂದರ್ಭಗಳು ಎಲ್ಲರಿಗೂ ಸಿಗೋದಿಲ್ಲ' ಎಂದು, ತಾನೂ ಡ್ಯಾಷ್ಬೋರ್ಡಿನ ಮುಂದಕ್ಕೆ ಬಾಗಿ ಆಸಕ್ತಿಯಿಂದ ಗಮನಿಸತೊಡಗಿದ. ಬಂಪರಿಗೆ ಹಣೆಯನ್ನು ಕೊಟ್ಟು, ವಾಹನವನ್ನು ಕೊಂಚ ಹಿಂದಕ್ಕೆ ತಳ್ಳಿದ ಕೋಣ, ಎರಡ್ಹೆಜ್ಜೆ ಹಿಂದಕ್ಕೆ ಸರಿದು ತನ್ನ ತಲೆಯನ್ನು ಮೂರ್ನಾಲ್ಕು ಬಾರಿ ಅರ್ಧ ಚಂದ್ರಾಕಾರವಾಗಿ ಆಡಿಸಿ, ವಾಹನದೊಳಗಿದ್ದವರೆಡೆಗೆ ಅರ್ಥಗರ್ಭಿತವಾಗಿ ನೋಡಿ ನಿಧಾನವಾಗಿ ಮರಗಳತ್ತ ಸರಿದು ಪೊದೆಗಳ ಸಂದಿಯಲ್ಲಿ ಮರೆಯಾಯಿತು. ಏನು ಹೇಳಲಿಕ್ಕಿತ್ತೋ, ಏನ ಹೇಳಿತೋ, ಕಾಡಿನ ಗುಟ್ಟನ್ನು ಬಲ್ಲವರಾರೋ?

ಬದುಕಿನ ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದ ಆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಆ ಗುಂಗಿನಿಂದ ಹೊರಬರಲು ಬಹಳ ಹೊತ್ತು ತೆಗೆದುಕೊಂಡರು. ಕಾಡು ಹಾಗೂ ಪೊದೆಗಳ ಪ್ರದೇಶದಿಂದ ಕೊಂಚ ಹೊರಸರಿದ ನಂತರ ಸಫಾರಿ ವಾಹನ ಹುಲ್ಲುಗಾವಲಿನಂಥಾ ಬಯಲನ್ನು ಪ್ರವೇಶಿಸಿತು. ವಾಹನ ಚಾಲಕ, ವಾಹನವನ್ನು ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ನಿಲ್ಲಿಸಿದ. ಹಿಂದಕ್ಕೆ ತಿರುಗದೇ ತನ್ನ ಎಡಗೈಯ್ಯ ಹಸ್ತವನ್ನಗಲಿಸಿ ಎಲ್ಲರೂ ಸದ್ದು ಮಾಡದೇ ಹಾದಿಯ ಎಡಪಕ್ಕದ ಬಯಲಿನೆಡೆಗೆ ಗಮನ ಹರಿಸುವಂತೆ ಸಂಜ್ಞೆ ಮಾಡಿದ.


© ಪೃಥ್ವಿ ಬಿ.

ಮೂರ್ನಾಲ್ಕು ಅಡಿ ಎತ್ತರಕ್ಕೆ ಬೆಳೆದಿದ್ದ ಹುಲ್ಲಿನ ರಾಶಿಯ ನಡುವೆ ಅಗಾಧ ಗಾತ್ರದ ಹುಲಿಯೊಂದು ಮಧ್ಯಾಹ್ನ ಭೋಜನದ ನಂತರದ ವಿಶ್ರಾಂತಿ ಪಡೆಯುವಂತೆ ಅದೆತ್ತಲೋ ನೋಡುತ್ತಾ ವಿಶ್ರಮಿಸುತ್ತಿತ್ತು. ಅದರ ಮಾರುದ್ದದ ಬಾಲ ಸುತ್ತಲಿನ ಹುಲ್ಲಿಗೆ ಪೈಪೋಟಿ ಎಂಬಂತೆ ನೆಟ್ಟಗೆ ನಿಗುರಿಕೊಂಡು ತುದಿಯ ಗೇಣುದ್ದದಷ್ಟು ವಿಶಿಷ್ಟವಾದ ಲಹರಿಯಲ್ಲಿ ತೊನೆಯುತ್ತಿತ್ತು. ವಾಹನದಲ್ಲಿ ಎತ್ತರದ ಜಾಗದಲ್ಲಿ ಕುಳಿತಿದ್ದುದ್ದರಿಂದ ಇವರಿಗೆ ಹುಲಿಯ ದೇಹ ಕಾಣಿಸುತಿತ್ತೇ ಹೊರತು, ನೆಲದಲ್ಲಿ ನಿಂತಿದ್ದರೆ ತೊನೆಯುತ್ತಿದ್ದ ಆ ಬಾಲದ ತುದಿ ಮಾತ್ರ ಗೋಚರಿಸುತ್ತಿತ್ತು. ಫಳಫಳನೆ ಕಂಗೊಳಿಸುತ್ತಿದ್ದ ಆ ಹಳದಿ ದೇಹದ ಮೇಲೆ ದೇವರೇ ಪಡಿಯಚ್ಚು ಹಾಕಿದಂತೆ ಕಲಾತ್ಮಕವಾಗಿ ಒಡಮೂಡಿದ್ದ ಆ ಕಪ್ಪು ಪಟ್ಟಿಗಳು ಜಗತ್ತಿನ ಎಲ್ಲಾ ಸೌಂದರ್ಯವನ್ನು ಎರಕ ಹೋಯ್ದಿಟ್ಟಂತೆ ಕಾಣುತ್ತಿತ್ತು. ಏನೋ ಅಸಹಜವಾದದ್ದನ್ನು ಗ್ರಹಿಸಿದಂತೆ ಜಾಗೃತಗೊಂಡ ಆ ಹುಲಿರಾಯ ತನ್ನ ಕತ್ತನ್ನೊಮ್ಮೆ ಹೊರಳಿಸಿ ಮುಖವನ್ನು ಬೆನ್ನ ಹಿಂದಕ್ಕೆ ತಿರುಗಿಸಿ ಸಫಾರಿ ವಾಹನದೆಡೆಗೆ ನೋಡಿತು. ಇಡೀ ಕಾಡಿಗೆ ಕಾಡೇ ಜ್ಯೋತಿಯಾಗಿ ಉರಿದಂತೆ


© ಧನಂಜಯ ಜೀವಾಳ

ಆ ಸಫಾರಿ ವಾಹನದೊಳಗಿದ್ದ ಪ್ರತಿಯೋರ್ವರಿಗೂ ತಮ್ಮೊಳಗೆ ನಾನೂರ ನಲವತ್ತು ವೋಲ್ಟ್ ವಿದ್ಯುತ್ ಝುಗ್ ಎಂದು ಪ್ರವಹಿಸಿದಂತಾಯಿತು. ಅಕ್ಕಿ ಕೇರುವ ದೊಡ್ಡ ಗಾತ್ರದ ಮೊರದಷ್ಟಗಲವಿದ್ದ ಆ ಮೊಗವನ್ನು ಕಂಡ ಆ ಕ್ಷಣ ಎಲ್ಲರ ಮನದಲ್ಲಿ ಸಾಕ್ಷಾತ್ ದೇವರನ್ನು ಕಂಡ ಅನುಭೂತಿಯನ್ನು ಮೂಡಿಸಿತು. ಅಗ್ನಿದೇವನೇ ಘನೀಕರಿಸಿ ಹುಲಿಯ ರೂಪದಲ್ಲಿ ದೇದೀಪ್ಯಮಾನನಾಗಿ ಅವತರಿಸಿದ್ದಾನೇನೋ ಎಂಬಂತೆ ಎಲ್ಲರೂ ಧನ್ಯತೆಯ ಅನನ್ಯಭಾವದಲ್ಲಿ ಪರವಶರಾದರು. ಇಡೀ ಪ್ರಾಣಿ ಪ್ರಪಂಚದಲ್ಲಿ ಹುಲಿಗೆ ಯಾಕೆ ವಿಶಿಷ್ಟವಾದ ಹಾಗೂ ಅಪೂರ್ವವಾದ ಸ್ಥಾನವಿದೆ ಎಂದು ಅವರಿಗೆ ಆ ಕ್ಷಣ ವೇದ್ಯವಾಯಿತು. ನಿಗಿನಿಗಿ ಎನ್ನುತ್ತಿದ್ದ ಆ ಕೆಂಡದಂಥಾ ಕಣ್ಣುಗಳು, ಜಗತ್ತಿನೆಲ್ಲಾ ಶೌರ್ಯವನ್ನು ಪ್ರತಿನಿಧಿಸುತ್ತಿದೆಯೇನೋ ಎಂಬಂಥಾ ಆ ಮೀಸೆಗಳು, ಇಡೀ ಅಡವಿಯ ಗಾಂಭೀರ್ಯವೇ ಹರಳುಗಟ್ಟಿದೆಯೇನೋ ಎನ್ನುವಂಥಾ ಮುಖಮುದ್ರೆ, ಆ ದೇವರೇ ಕೆತ್ತಿ, ಕಟೆದು, ಕೊರೆದು, ತಿಕ್ಕಿ ನಿರ್ಮಿಸಿದಂಥಾ ಅಮೋಘ ಅಂಗಸೌಷ್ಠವದ ಹುಲಿರಾಯ ಕೊಂಚ ಹೊತ್ತು ಇವರೆಡೆಗೆ ದೃಷ್ಟಿಸಿ, ತನ್ನ ಬಲಿಷ್ಠ ದೇಹವನ್ನೊಮ್ಮೆ ಗತ್ತಿನಿಂದ ಸೆಟೆಸಿ, ಮೈಮುರಿದು, ವರ್ಣಿಸಲಸದಳವಾದ ಘನತೆಯ ನಿಲುವಿನೊಂದಿಗೆ ಆ ವಿಸ್ತಾರವಾದ ಹುಲ್ಲುಗಾವಲಿನಲ್ಲಿ ಮರೆಯಾಯಿತು.

ಬದುಕಿನಲ್ಲೆಂದೆಂದೂ ಮರೆಯಲಾಗದ ಅವರ್ಣನೀಯ ಅನುಭವ ಪಡೆದ ಶಾಲಾಮಕ್ಕಳು, ಈ ಪ್ರವಾಸ ಎಂದೆಂದಿಗೂ ಕೊನೆಯಾಗದೇ ಹೀಗೇ ಮುಂದುವರೆಯುತ್ತಿರಲಿ ಎಂದು ಆ ದೇವರನ್ನು ಬೇಡುತ್ತಿದ್ದರು.





ಪ್ರವಾಸದ ರಸನಿಮಿಷಗಳನ್ನು ಮೆಲುಕು ಹಾಕುತ್ತಾ ಊರಿನೆಡೆಗೆ ಹೊರಟ ತಂಡ ದಾರಿಯುದ್ದಕ್ಕೂ ಚರ್ಚಿಸದ ವಿಚಾರವೇ ಇರಲಿಲ್ಲ. ನಮ್ಮ ಬದುಕು ಹೇಗೆ ರೂಪುಗೊಳ್ಳುತ್ತಾ ಹೋಗುತ್ತದೆ ಎಂಬುದನ್ನು ತನ್ನ ಸಹೋದ್ಯೋಗಿಗಳೊಂದಿಗೆ ಚರ್ಚಿಸುತ್ತಾ, ಗಿರೀಶ್ ಮೇಷ್ಟ್ರು, ನಮ್ಮ ಬದುಕನ್ನು ರೂಪಿಸಿದವರು, ಬದುಕಿನ ದೃಷ್ಟಿಕೋನವನ್ನು ಕಟ್ಟಿಕೊಟ್ಟವರು, ಬದುಕಿನ ತಿರುವುಗಳನ್ನು ಹೊರಳಿಸಿದವರು, ನಾವು ಆಲೋಚಿಸುವ ರೀತಿಯನ್ನು ಪ್ರಭಾವಿಸಿದವರು ಯಾರ್ಯಾರೆಂದು ಹಿಂದಿರುಗಿ ನೋಡಿದರೆ, ನಮ್ಮನ್ನು ಹುಟ್ಟಿಸಿದವರು, ಹೆತ್ತು ಬೆಳೆಸಿದವರು, ಬಾಲ್ಯದಲ್ಲಿ ಬೆರಳು ಹಿಡಿದು ನಡೆಯಲು ಕಲಿಸಿದವರು, ಅಕ್ಷರ ತಿದ್ದಿಸಿದವರು, ಬಾಲ್ಯದಲ್ಲಿ ಕ್ಲಾಸ್‌ರೂಮಿನ ಬೆಂಚಿನಿಂದ ನೂಕಿ ಬೀಳಿಸಿದವರು, ಏನಾಗಲ್ಲ

ಬಾ ಎಂದು ಎರಡಾಳುದ್ದದ ನೀರಿನ ಹೊಂಡಕ್ಕೆ ನೆಗೆಸಿದವರು, ನಾನು ಬರೆದ ಚಿತ್ರವನ್ನೇ ತನ್ನದೆಂದು ತೋರಿಸಿ ಬೆನ್ನು ತಟ್ಟಿಸಿಕೊಂಡವರು, ಬೇಕಿದ್ರೆ ಇದ ತಗೋ; ಇಲ್ದಿದ್ರೆ ಏನೂ ಇಲ್ಲ ಎಂದು ಬಾಗಿಲು ತೋರಿದವರು, ಸೀಬೇಹಣ್ಣು ಕದಿಯಲು ಮರ ಹತ್ತಿಸಿ; ಮಾಲೀಕ ಓಡಿಸಿಕೊಂಡು ಬಂದಾಗ ನನ್ನನ್ನು ಸಿಕ್ಕಿಹಾಕಿಸಿ ಓಡಿ ಹೋದವರು, ಇವತ್ತು ನಿಮ್ಮಪ್ಪನ ಜೇಬಿನಿಂದ ಹತ್ರುಪಾಯಿ ಎಗರಿಸಿಕೊಂಡು ಬಾ ಎಂದು ಹುರಿದುಂಬಿಸಿದವರು, ಈ ಲವ್ ಲೆಟರನ್ನು ಅವಳಿಗೆ ಕೊಟ್ಟು ಬಾ ಎಂದು ಪೂಸಿ ಮಾಡಿದವರು, ನೀನಾಗಿಯೇ ಮಾಡಿಕೊಂಡಿದ್ದು; ಎಲ್ಲಾ ನಿನ್ನ ಹಣೆಬರಹ ಎಂದವರು, ತಮಗಾಗದ್ದನ್ನು ನಾ ಸಾಧಿಸಿದಾಗ ತಾನೇ ಗೆದ್ದಂತೆ ಸಂಭ್ರಮಿಸಿದವರು, ನನ್ನ ಎದುರಾಗಿ ಸಾಕ್ಷಿ ಹೇಳಿದರೆ ಕಾಲ್ಮುರೀತೀನಿ ಎಂದವರು, ಎಂದೋ ಬಸ್ಸಿನಲ್ಲಿ ನಮ್ಮ ಪಕ್ಕದಲ್ಲಿ ಕುಳಿತು ಪಯಣಿಸಿದವರು, ಪರೀಕ್ಷೆಯ ಹಿಂದಿನ ದಿನದವರೆಗೂ ನೋಟ್ಸ್ ಇವತ್ತು ವಾಪಾಸ್ ಕೊಡ್ತೀನಿ, ನಾಳೆ ಕೊಡ್ತೀನಿ ಅಂತ ಆಟವಾಡಿಸಿದವರು.





ಸಾಧ್ಯವೇ ಇಲ್ಲವೆಂದು ಕೈಚೆಲ್ಲಿ ಹತಾಶನಾದಾಗ ಅಂಡಿನ ಮೇಲೆ ಬಾರಿಸಿ ಉತ್ಸಾಹ ತುಂಬಿದವರು, ಕಡ್ಡಿಯಲ್ಲೂ ಮುಟ್ಟಬಾರದ್ದನ್ನು ಕಾಲಿನಿಂದ ಮೆಟ್ಟಿಸಿ ಚಪ್ಪಾಳೆ ತಟ್ಟಿದವರು, ಒಳ್ಳೆಯ ಹಣ್ಣು ತೋರಿಸಿ; ಕೊಳೆತಿದ್ದನ್ನು ಪ್ಯಾಕ್ ಮಾಡಿಕೊಟ್ಟವರು, ನನಗೆ ಕಾಣಿಸುವಂತೆ ಇಟ್ಟುಕೊಂಡು ಬರೆಯದಿದ್ದರೆ; ಹೊರಗೆ ಬಂದಾಗ ನೋಡ್ಕೋತೀನಿ ಎಂದವರು, ನನ್ ಹತ್ರವೂ ಲೆಟರ್ ಇಸ್ಕೊಂಡು, ಇನ್ನೂ ಇಬ್ಬರೊಡನೆಯೂ ಕಣ್ಣಿನಲ್ಲಿಯೇ ಕಾವ್ಯ ಬರೆಯುತ್ತಿದ್ದವಳು, ನೀನು ನನಗೆ ಮ್ಯಾಚಾ? ಹಥಾ ಎಂದವಳು, ನಿನಗೆ ನನಗಿಂತಲೂ ಒಳ್ಳೇ ಹುಡುಗಿ ಸಿಕ್ತಾಳೆ ಎಂದು ಸಮಾಧಾನ ಹೇಳಿದವಳು, ಹುಟ್ಟಿ ಬೆಳೆದ ಮನೆ ಬಿಟ್ಟು ಬಾಳಿನುದ್ದಕ್ಕೂ ಜೊತೆಯಲ್ಲಿರುವೆ ಎಂದು ಕೈಹಿಡಿದವಳು, ನಾವೇ ಜನ್ಮ ನೀಡಿದ ಮಕ್ಕಳು, ಜೊತೆಯಲ್ಲಿದ್ದೇ ನಯವಾಗಿ ಬತ್ತಿ ಇಟ್ಟವರು, ಅನಿರೀಕ್ಷಿತವಾಗಿ ಸಹಾಯ ಮಾಡಿದವರು, ನಮ್ಮನ್ನು ಟಿಶ್ಯೂ ಪೇಪರಿನಂತೆ ಬಳಸಿ ಎಸೆದವರು, ದಿಕ್ಕೆಟ್ಟು ಕೂತಾಗ ಹೊಸ ಸಾಧ್ಯತೆ



ತೋರಿದವರು, ಹಣ ಪಡೆದೂ ಕೆಲಸ ಮಾಡದೆ ಕೈ ಎತ್ತಿದವರು, ವಿಷಮ ಪರಿಸ್ಥಿತಿಯಲ್ಲಿ ಜೊತೆ ನಿಂತು ಸಂಬಾಳಿಸಿದವರು, ಸಾರ್ವಜನಿಕವಾಗಿ ಅಪಮಾನಿಸಿದವರು, ಕಿವಿ ಹಿಡಿದು ಬುದ್ದಿ ಹೇಳಿದವರು, ಬೆಂಗಳೂರಿನಲ್ಲಿ ಕೆಲಸವೊಂದನ್ನು ಹಿಡಿದು; ಬಂದು ನಿನ್ನನ್ನು ಕರೆದೊಯ್ಯುತ್ತೇನೆಂದು ಹೇಳಿ ಶಾಶ್ವತವಾಗಿ ನಿರ್ಗಮಿಸಿದವರು, ಎದುರಾ ಎದುರು ಮುಖಭಂಗ ಮಾಡಿದವರು, ಭುಜ ಅಮುಕಿ ಧೈರ್ಯ ತುಂಬಿದವರು, ಹೆಜ್ಜೆಹೆಜ್ಜೆಗೂ ಅಡ್ಡಗಾಲು ಹಾಕಿದವರು, ನಮ್ಮಲ್ಲೂ ಇರಬಹುದಾದ ಸಣ್ಣತನವನ್ನು ತೆರೆದು ತೋರಿಸಿ ಕನ್ನಡಿಯಾದವರು, ಆತ್ಮವಿಶ್ವಾಸವೇ ಕೊಚ್ಚಿಹೋಗುವಂತೆ ತಿರಸ್ಕಾರದಿಂದ ನೋಡಿದವರು, ಏನೂ ಆಗಲ್ಲ; ನಾನಿದ್ದೇನೆ ಎಂದು ಹೆಗಲು ಕೊಟ್ಟು ನಿಂತವರು ಹೀಗೆ ಪಟ್ಟಿ ನಿರಂತರವಾಗಿ ಬೆಳೆಯುತ್ತಲೇ ಹೋಗುತ್ತದೆ.

ಪ್ರತಿಯೋರ್ವರ ಬದುಕಿನಲ್ಲಿ ಇಂತಹ ಹತ್ತಾರು ಸಂದರ್ಭಗಳು ಮಿಂಚಿ, ಶಾಶ್ವತವಾದ ತಿರುವುಗಳನ್ನು ಸೃಷ್ಟಿಸಿ ಎಂದೆಂದಿಗೂ ಹಿಂದಿರುಗಲಾರದ ಜೀವಪ್ರವಾಹದಲ್ಲಿ ಲೀನವಾಗಿರುತ್ತದೆ. ಈ ಮೇಲಿನ ಸಾಲುಗಳನ್ನು ಕೇಳುತ್ತಿರುವಾಗ ನಿಮ್ಮ ಸ್ಮೃತಿಪಟಲದಲ್ಲಿ ಮಿಂಚಿ ಮಾಯವಾದವರೆಷ್ಟೋ? ಬುದ್ಧ, ಬಸವ, ವಿವೇಕಾನಂದ, ಗಾಂಧೀ ಇನ್ಯಾರೋ ಸಾಹಿತಿ ನಮ್ಮ ಬದುಕನ್ನು ಪ್ರಭಾವಿಸಿದರು, ರೂಪಿಸಿದರು, ಪ್ರೇರಣೆ ನೀಡಿದರು ಎಂಬುದೆಲ್ಲ ವಾಸ್ತವವಾಗಿ ಸಿನಿಕತನವಲ್ಲದೇ, ಬೇರೇನಲ್ಲ.




ಲೇಖನ: **ಧನಂಜಯ ಜೀವಾಳ**

ಚಿಕ್ಕಮಗಳೂರು ಜಿಲ್ಲೆ




ವಿವಿ ಅಂಕಣ

# $CO_2$ ಉಗುಳುವ ಆರ್ಕಟಿಕ್ ಕಾರ್ಖಾನೆ!

ಬಿಸಿಲಿನ ತಾಪಕ್ಕೆ ಏನೂ ಕೆಲಸ ಮಾಡದೆ ಇದ್ದರೂ ಬೆವರುವಂಥಹ ವಾತಾವರಣ ರಾಮನಗರದ್ದು. ಅಂತಹುದರಲ್ಲಿ ನಾನು ಸೈಕಲ್ ತುಳಿದು ಕಾಲೇಜಿಗೆ ಹೋಗುತ್ತಿದ್ದೆ. 4 ಕಿ. ಮೀ. ದೂರ, ನನ್ನ ಸಂಗೀತ ಕೇಳುವ ಹವ್ಯಾಸದಿಂದಲೋ ಅಥವಾ ಬೇರೆ ಕಾರ್ಬನ್ ಉಗುಳುವ ವಾಹನಗಳಲ್ಲಿ ಹೋಗಬಾರದೆಂಬ ಧೃಡ ತೀರ್ಮಾನವೋ ತಿಳಿಯದು, ಪ್ರತಿ ದಿನದ ಆ ಸೈಕಲ್ ಸವಾರಿ ಖುಷಿ ಕೊಡುತ್ತಿತ್ತು. ಜೊತೆಗೆ ಅಷ್ಟು ಬೆವರಿದ ಮೇಲೆ ಆಗಲೋ-ಈಗಲೋ ಬೀಸುತ್ತಿದ್ದ ಕೊಂಚ ಗಾಳಿ, ‘ನಿನ್ನ ನಿರ್ಧಾರಕ್ಕೆ ನನ್ನ ಬೆಂಬಲವಿದೆ’ ಎಂದು ಸುತ್ತಲಿನ ಪರಿಸರ ಪಿಸುಗುಡುತ್ತಿದೆ ಎನ್ನುವಂತೆ ನನ್ನ ಬುದ್ಧಿ ಊಹಿಸುತ್ತಿತ್ತು. ಅದಾದ ನಂತರ ಕಾರಣಾಂತರಗಳಿಂದ ಸೈಕಲ್ ಸವಾರಿ ಬದಲಿಗೆ ದ್ವಿತೀಯ ವರ್ಷದಿಂದ ಕಾಲೇಜಿಗೆ ಓಡಾಡಲು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಕಡೆಗೆ ಮುಖ ಮಾಡಬೇಕಾಯಿತು. ನನ್ನದೇ ಇಂಗಾಲ ಉಗುಳುವ ವಾಹನ ಇರುವುದಕ್ಕಿಂತ ಈ ಆಯ್ಕೆ ಉತ್ತಮವಾದರೂ ಸ್ವಲ್ಪ ಹಿಂಜರಿಕೆ ಇತ್ತು. ಹೀಗೆ ವಾತಾವರಣಕ್ಕೆ ಇಂಗಾಲ ಉಗುಳುವ ಕೆಲಸಗಳಿಗೆ ಎಷ್ಟೋ ವಿಧಗಳಲ್ಲಿ ನಾವೆಲ್ಲಾ ಭಾಗಿಯಾಗಿಬಿಟ್ಟಿದ್ದೇವೆ. ಪ್ರತಿ ದಿನವೂ ಇದು ನಡೆಯುತ್ತಲೇ ಇದ್ದರೂ ನಾವು ಮಾತ್ರ ಇವುಗಳನ್ನು ಗಮನಿಸುವುದಿಲ್ಲ ಅಷ್ಟೇ! ಹೀಗೇ ದಶಕಗಳ ನಮ್ಮ ಶ್ರಮದಿಂದ ಹಾಗೂ ಕೆಲವು ಸ್ವಾಭಾವಿಕ ಕಾರಣಗಳಿಂದ ಜಾಗತಿಕ ತಾಪಮಾನ ಇದರ ಪರಿಣಾಮವಾಗಿ ಏರುತ್ತಾ ಬಂದಿದೆ. ಇದು ನಮ್ಮ ನಿಮ್ಮೆಲ್ಲರಿಗೂ ತಿಳಿದ ವಿಚಾರ. ಇದೇ ವಿಷಯವಾಗಿ ಇಲ್ಲಿದೆ ಹೊಸ ಸುದ್ದಿ. ನಮ್ಮ ಪ್ರಕೃತಿಯೊಡಗಿನ ಸಲಿಗೆಯ ದುರುಪಯೋಗದ ಪರಿಣಾಮವಾಗಿ ಏರುತ್ತಿರುವ ಜಾಗತಿಕ ತಾಪಮಾನದ ಪರಿಣಾಮವಾಗಿ, ಆರ್ಕಟಿಕ್ ನಲ್ಲಿ ಕಂಡು ಬರುವ ‘ಟಂಡ್ರಾ’ ಜೀವವೈವಿಧ್ಯ ಪ್ರದೇಶಗಳಲ್ಲಿ ಬೆಳೆಯುವ ಸಸ್ಯಗಳು ಹೆಚ್ಚೆಚ್ಚು ‘ಕಾರ್ಬನ್ ಡೈ ಆಕ್ಸೈಡ್($CO_2$)’ನ್ನು ಬೇರೆಲ್ಲಾ ಭಾಗದ ಜೀವವೈವಿಧ್ಯಗಳಿಗಿಂತ 4 ಪಟ್ಟು ಹೆಚ್ಚು ಉತ್ಪತ್ತಿ ಆಗಲು ಕಾರಣವಾಗುತ್ತಿವೆ.




ಹೆಚ್ಚಾಗಿ ಹುಲ್ಲು, ಸಣ್ಣ ಸಸ್ಯಗಳು ಹಾಗೂ ಪಾಚಿಗಳು ಕಂಡುಬರುವ ಅರ್ಕಟಿಕ್ ನ ಈ 'ಟಂಡ್ರಾ ಬಯೋಮ್' ಇಂಗಾಲವನ್ನು ಶೇಖರಿಸಿ ಭೂಮಿಯಲ್ಲಿ ಹುದುಗಿಟ್ಟಿರುವ ದೊಡ್ಡ ಖಜಾನೆಯಾಗಿದೆ. ಆದರೆ ಹೆಚ್ಚುತ್ತಿರುವ ಈ ಜಾಗತಿಕ ತಾಪಮಾನದ ಕಾರಣವಾಗಿ ಈ ಮಣ್ಣಿನಲ್ಲಿ ಇರುವ ಸೂಕ್ಷ್ಮಜೀವಿಗಳು ಹೆಚ್ಚೆಚ್ಚು ಇಂಗಾಲದ ಡೈ ಆಕ್ಸೈಡನ್ನು ವಾತಾವರಣಕ್ಕೆ ಬಿಡುವಂತೆ ಮಾಡುತ್ತಿವೆ. ಈ ವಿಚಾರ ತಿಳಿದದ್ದು ಹೀಗೆ, ಸುಮಾರು 70 ಜನ ವಿಜ್ಞಾನಿಗಳು ಸೇರಿ ನಡೆಸಿದ ಈ ಪ್ರಯೋಗದಲ್ಲಿ, 28 ಟಂಡ್ರಾ ಪ್ರದೇಶಗಳನ್ನು ಆರಿಸಿಕೊಂಡರು. ಅಲ್ಲಿ ಬೆಳೆಯುವ ಸಸ್ಯಗಳ/ಹುಲ್ಲಿನ ಮೇಲೆ ಸುಮಾರು 1 ಮೀಟರ್ ವ್ಯಾಸದ ವೃತ್ತಾಕಾರದ ಪಾರದರ್ಶಕ ಪ್ಲಾಸ್ಟಿಕ್ ಅನ್ನು ಇಟ್ಟರು. ಇವು ಗಾಳಿ ಹಾಗೂ ತೇವಾಂಶವನ್ನು ಬಿಡುವ ಹಾಗೂ ಗಾಳಿಯನ್ನು ತಡೆಯುವ ಹಸಿರು ಮನೆಯಾಗಿ ಕೆಲಸ ಮಾಡಿದವು. ಇದರಿಂದಾಗಿ ಈ ವೃತ್ತಕಾರದ ಒಳಗಿನ ತಾಪಮಾನ 1.4° C ಹೆಚ್ಚಾಗಿತ್ತು. ಇದಾದ ನಂತರ ವಿಜ್ಞಾನಿಗಳು ಆ ವೃತ್ತಾಕಾರದ ಒಳಗಿನ ಸೂಕ್ಷ್ಮಜೀವಿಗಳ ಕ್ರಿಯೆಯನ್ನು ಗಮನಿಸಿದರು. ಆಗ ತಿಳಿದ ವಿಷಯ, ಅಲ್ಲಿನ ಸೂಕ್ಷ್ಮಜೀವಿಗಳು ಹೊರಗಿನ ಸೂಕ್ಶ್ಮಜೀವಿಗಳಿಗಿಂತ ಹೆಚ್ಚು ಚುರುಟಿಯಾಗಿದ್ದು, ಹೆಚ್ಚೆಚ್ಚು $CO_2$ವನ್ನು ಗಾಳಿಗೆ ಉಗುಳುತ್ತಿತ್ತು ಎಂದು. ನಿಖರವಾಗಿ ಹೇಳುವುದಾದರೆ 1/3 ರಷ್ಟು ಹೆಚ್ಚು. ಇದು ಸುಮಾರು 25 ಋತುಗಳಲ್ಲಿ, ವಿವಿದ ಟಂಡ್ರಾ ಪ್ರದೇಶಗಳಲ್ಲಿ ಪ್ರಯೋಗ ನಡೆಸಿ ಪಡೆದ ಫಲಿತಾಂಶವಾಗಿತ್ತು. ಇದರ ಜೊತೆಗೆ ತಿಳಿದ ಇನ್ನೊಂದು ವಿಚಾರ, ಎಲ್ಲೆಲ್ಲಿ ಅಂದರೆ ಆ ಪ್ರದೇಶದ ಮಣ್ಣಿನಲ್ಲಿ ಸಾರಜನಕ(ನೈಟ್ರೋಜನ್) ಪ್ರಮಾಣ ಕಡಿಮೆ ಇತ್ತೋ ಅಲ್ಲಿನ ಸೂಕ್ಶ್ಮಜೀವಿಗಳು, ಅಲ್ಲಿನ ಸಸ್ಯಗಳಿಗೆ ಸಾರಜನಕವನ್ನು ಒದಗಿಸಲು ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದವು ಇದರ ಪರಿಣಾಮ ಅಲ್ಲಿ ಇನ್ನೂ ಹೆಚ್ಚಿನ $CO_2$ ಉತ್ಪತ್ತಿಯಾಗುತ್ತಿತ್ತು.



ಇದರಿಂದ ತಿಳಿಯುವ ಮತ್ತೊಂದು ವಿಚಾರ, ಜಾಗತಿಕ ತಾಪಮಾನದ ಏರಿಕೆಯಿಂದ ಇಂಗಾಲ ಉಗುಳುವ ಸೂಕ್ಶ್ಮಜೀವಿಗಳ ಕ್ರಿಯಾಶೀಲತೆಯೂ ಹೆಚ್ಚುತ್ತದೆ ಎಂದು, ಈ ಮುಂಚೆಗಿಂತ ಹೆಚ್ಚು ನಿಖರವಾಗಿ ಈ ಸಂಶೋಧನೆಯಿಂದ ಧೃಡಪಟ್ಟಿದೆ. NASA ಹೇಳಿಕೆಯ ಪ್ರಕಾರ 1700 ಬಿಲಿಯನ್ ಮೆಟ್ರಿಕ್ ಟನ್ ಇಂಗಾಲವನ್ನು ತನ್ನಲ್ಲಿ ಹುದುಗಿಸಿ ಇಟ್ಟುಕೊಂಡಿರುವ ಟಂಡ್ರಾ ಪ್ರದೇಶಗಳು ಜಾಗತಿಕ ತಾಪಮಾನ ಏರಿದಂತೆ ವಾತಾವರಣಕ್ಕೆ

ಸೇರುತ್ತಾ ಬರುತ್ತದೆ. ಇದು ಹೀಗೆ ಮುಂದುವರೆದರೆ, 2100 ಇಸವಿಗೆ 22-524 ಬಿಲಿಯನ್ ಮೆಟ್ರಿಕ್ ಟನ್ ಇಂಗಾಲ ನಮ್ಮ ವಾತಾವರಣ ಸೇರಬಹುದಂತೆ. ಹಾಗೆಂದ ಮಾತ್ರಕ್ಕೆ ಈ ಪ್ರದೇಶಗಳು ಕೇವಲ ಇಂಗಾಲ ಉಗುಳುವ ಆರ್ಕ್ಟಿಕ್ ಕಾರ್ಖಾನೆಗಳಾಗಬೇಕಿಲ್ಲ! ಅದೇ ಪ್ರದೇಶಗಳಲ್ಲಿ ಸಸ್ಯಗಳ ದ್ಯುತಿಸಂಶ್ಲೇಷಣೆಯಿಂದ ಇಂಗಾಲವನ್ನು ಶೇಖರಿಸುವ ಕೆಲಸವೂ ಆಗುತ್ತದೆ. ಆದರೆ ಈ ಕ್ರಿಯೆ ಹೆಚ್ಚಬೇಕೆಂದರೆ ಜಾಗತಿಕ ತಾಪವನ್ನು ಏರಿಸುವ ಕ್ರಿಯೆಗಳ ಕಡಿತವಾಗಬೇಕಿದೆ. ಈ ಕಡಿತಕ್ಕೆ ಇಂಗಾಲ ಉಗುಳುವ ಕೆಲಸಗಳಿಗೆ ತಿಳಿದೋ ತಿಳಿಯದೆಯೋ ದಿನನಿತ್ಯದಲ್ಲಿ ನಿಯತ್ತಾಗಿ ಕೆಲಸ ಮಾಡುತ್ತಿರುವ ನಾವು-ನೀವುಗಳು ನಮ್ಮ ಅರಿವಿನ ಗಮನವನ್ನು ಇಂಗಾಲ ಉತ್ಪಾದನೆ ಕಡಿತವಾಗುವ ಕೆಲಸಗಳತ್ತ ಹರಿಸಿದರೆ, ಭೂಮಿ ತಾಯಿ ನಾವು ಇನ್ನೂ ಕೆಲ ಕಾಲ ಆರೋಗ್ಯವಾಗಿ ಭೂಮಿಯ ಮೇಲೆ ಸಹಬಾಳ್ವೆಯಿಂದ ಬಾಳಲು ಹರಸಿಯಾಳು!



**Source:** [www.snexplores.org](www.snexplores.org)

**ಲೇಖನ: ಜೈಕುಮಾರ್ ಆರ್.**

**ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ**

# ನಿರೀಕ್ಷೆ

ನಾನೊಂದು ಬೀಜ ರೈತ ಹೊತ್ತು ಬಿತ್ತ ನೆಲದಲಿ;
ಮಣ್ಣಲಿ ಮಣ್ಣಾಗಿ ಮುಳುಗಿದರೂ
ಅವನಾರೋ ಮೇಘರಾಯನ ಸಹವಾಸದಿ
ಟಿಸಿಲೊಡೆದು ಹೊಸ ಬದುಕ ಕಾಣುವಾಸೆ.

ಕಂಡ ಕನಸು ನನಸಾಗಲು ಬೇಕಿದೆ ಪರಿಶ್ರಮ
ಏನಾದರೇನು? ಪೊರೆ ಕಳಚಿ; ಹೊಸ ಜಗವ ನೋಡುವಾಸೆ
ಒಂದೆಲೆ, ಎರಡೆಲೆ, ನಾಲ್ಕೆಲೆಗಳೆಂದು ದ್ವಿಗುಣಿಸಿ
ಗಟ್ಟಿಗೊಳಿಸಿಕೊಳ್ಳುವೆ ನನ್ನಿರುವ.

ಗೆದ್ದು ಬೀಗಬೇಕೆಂಬ ಹಂಬಲವಲ್ಲ
ಗೆದ್ದೇ ಗೆಲ್ಲುವೆನೆಂಬ ನಂಬಿಕೆ ಅಚಲ
ಹರಿತ್ತಿನೊಟ್ಟಿಗೆ ಬೆಸೆದ ಬದುಕ ಪೂರ್ಣ ಜೀವಿಸುವಾಸೆ
ಗಾಳಿ, ಬೆಳಕ, ನೀರನೂಡಿದ ಇಳೆಗೆ ಏನಾದರೂ ನೀಡುವಾಸೆ

ಏನ ನೀಡಲಿ?
ಗಾಳಿಯೂಡುವೆ, ನೆರಳನೀವೆ, ಹೂವನೀವೆ, ಕಾಯನೀವೆ, ಹಣ್ಣನೀವೆ
ಜನ್ಮವಿತ್ತವರಿಗೆ, ಸಹಕಾರವಿತ್ತವರಿಗೆ ಏನಿತ್ತರೂ ಕಡಿಮೆಯೇ?

ಆದರೂ ಕೊಡುವುದರಲ್ಲೇನೋ ಸಾರ್ಥಕವಿದೆ.
ಕೊಟ್ಟು ಪಡೆವ, ಪಡೆದು ಕೊಡುವ ಭಾವವಿದೆ.
ಮತ್ತೆ ಮತ್ತೆ ಬಿತ್ತುವ ಬಿತ್ತವಾಗಿ
ಹೊಸ ಜಗದ ನೇಮದ ಅಸ್ಮಿತೆಯ ಕಾಪಿಟ್ಟುಕೊಳ್ಳುವ ನಿರೀಕ್ಷೆಯಿದೆ.

- ಕಲ್ಪನ ಎಂ.
ತುಮಕೂರು ಜಿಲ್ಲೆ


© ಧನರಾಜ್ ಎಂ.

# ಪ್ರಕೃತಿ ಬಿಂಬ




ಮಕ್ಮಲ್ ನೆತ್ತಿಯ ಮರಗುಬ್ಬಿ © ವಿನೀತ್ ಕರ್ಥ

ದಕ್ಷಿಣ ಏಷ್ಯಾದ ನೇಪಾಳ, ಭಾರತ, ಶ್ರೀಲಂಕಾ ಮತ್ತು ಬಾಂಗ್ಲಾದೇಶ, ದಕ್ಷಿಣ ಚೀನಾ ಮತ್ತು ಇಂಡೋನೇಷ್ಯಾದ ಕಾಡುಗಳಲ್ಲಿ ಕಂಡುಬರುವ ಈ ಪುಟ್ಟ ಹಕ್ಕಿಯು ಸಿಟ್ಟಿಡೇ (Sittidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸಿಟ್ಟಾ ಫ್ರುಂಟಾಲಿಸ್ (*Sitta frontalis*) ಎಂದು ಕರೆಯಲಾಗುತ್ತದೆ. ದೇಹದ ಮೇಲ್ಭಾಗವು ನೇರಳೆ ಮತ್ತು ನೀಲಿ ಬಣ್ಣದಲ್ಲಿದ್ದು, ಬಿಳಿ ಬಣ್ಣದ ಕತ್ತು, ಹಳದಿ ಕಣ್ಣುಗಳು, ಕೆಂಪು ಕೊಕ್ಕು ಮತ್ತು ತೆಳುವಾದ ಕಂದು ಬಣ್ಣದ ಕೆಳಭಾಗವನ್ನು ಹೊಂದಿರುತ್ತದೆ. ಮರದ ಪೊಟರೆಗಳಲ್ಲಿ ಅಥವಾ ಬಿರುಕುಗಳಲ್ಲಿ ಹುಲ್ಲು, ಪಾಚಿ ಮತ್ತು ಗರಿಗಳಿಂದ ಗೂಡನ್ನು ಕಟ್ಟಿ, ಬಿಳಿಯ ಬಣ್ಣದ ಕೆಂಪು ಚುಕ್ಕೆಗಳಿರುವ 3-6 ಮೊಟ್ಟೆಗಳನ್ನು ಇಡುತ್ತದೆ. ಉತ್ತರ ಭಾರತದಲ್ಲಿ ಸಂತಾನೋತ್ಪತ್ತಿಯು ಬೇಸಿಗೆಯಲ್ಲಿ ನಡೆದರೆ, ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ಏಪ್ರಿಲ್ ನಿಂದ ಜೂನ್ ಹಾಗೂ ಜನವರಿಯಿಂದ ಮೇ ವರೆಗೆ ನಡೆಯುತ್ತದೆ. ಹಲವಾರು ಕೀಟಗಳು ಮತ್ತು ಜೇಡಗಳು ಇವುಗಳ ಆಹಾರವಾಗಿವೆ.



**ಗುಳುಮುಳುಕ** © **ವಿನೀತ್ ಕರ್ಥ**

ಭಾರತ, ಪಾಕಿಸ್ತಾನ, ಶ್ರೀಲಂಕಾ, ಮ್ಯಾನ್ಮಾರ್, ಬಾಂಗ್ಲಾದೇಶ ಪ್ರದೇಶಗಳ ವಿವಿಧ ಜಲಮೂಲಗಳಿರುವೆಡೆ ಕಂಡುಬರುವ ಈ ಹಕ್ಕಿಯು ಪೊಡಿಸಿಪಿಡಿಡೆ (Podicipedidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಟಾಕಿಬ್ಯಾಪ್ಟಸ್ ರುಫಿಕೋಲಿಸ್ (Tachybaptus ruficollis) ಎಂದು ಕರೆಯಲಾಗುತ್ತದೆ. ದೇಹವು ಕೆಂಪು ಮಿಶ್ರಿತ ಕಂದು ಬಣ್ಣದಲ್ಲಿದ್ದು, ಮೊನಚಾದ ಕೊಕ್ಕು ಹಾಗೂ ಕಿರಿದಾದ ರೆಕ್ಕೆಗಳನ್ನು ಹೊಂದಿದೆ. ಏಪ್ರಿಲ್ ನಿಂದ ಅಕ್ಟೋಬರ್ ಅವಧಿಯಲ್ಲಿ ಕೆರೆಗಳ ಜೊಂಡು, ತೇಲುವ ಕಸಕಡ್ಡಿಗಳ ಮೇಲೆ ಗೂಡು ಕಟ್ಟುತ್ತದೆ. ಸಣ್ಣಪುಟ್ಟ ಮೀನು, ಜಲಚರಗಳನ್ನು ತಿನ್ನುತ್ತದೆ. ನೀರಿನಲ್ಲಿ ಮುಳುಗೇಳುವುದು, ಈಜಾಡುವುದು ಇದರ ವಿಶೇಷತೆಯಾಗಿದೆ.



**ದೊಡ್ಡ ಬಂಡೆಗೊರವ** © **ವಿನೀತ್ ಕರ್ಥ**

ದಕ್ಷಿಣ ಏಷ್ಯಾದ ವಿವಿಧ ಪ್ರದೇಶಗಳಲ್ಲಿನ ಹರಿಯುವ ನದಿ ಮತ್ತು ಸರೋವರಗಳ ದಡದ ಕಲ್ಲು ಅಥವಾ ಮರಳಿನ ಮೇಲೆ ಕಂಡುಬರುವ ದೊಡ್ಡ ಬಂಡೆಗೊರವ ಹಕ್ಕಿಯು ಬರ್ಹಿನಿಡೆ (Burhinidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಎಸಾಕಸ್ ರಿಕರ್ವಿರೋಸ್ಟ್ರಿಸ್ (*Esacus recurvirostris*) ಎಂದು ಕರೆಯಲಾಗುತ್ತದೆ. ದೇಹದ ಮೇಲ್ಭಾಗವು ಬೂದು ಮಿಶ್ರಿತ ಕಂದು ಬಣ್ಣದಲ್ಲಿದ್ದು, ಕೆಳಭಾಗವು ಬಿಳಿಯ ಬಣ್ಣದ್ದಾಗಿದೆ. ಮುಖದ ಮೇಲೆ ಕಪ್ಪು ಮತ್ತು ಬಿಳಿ ಬಣ್ಣದ ಪಟ್ಟೆಗಳಿದ್ದು, ಹಳದಿ ತಳದ ಕಪ್ಪು ಕೊಕ್ಕನ್ನು ಹೊಂದಿದೆ. ಪ್ರಕಾಶಮಾನವಾದ ಹಳದಿ ಬಣ್ಣದ ಕಣ್ಣುಗಳು ಮತ್ತು ತೆಳುವಾದ ಹಸಿರು ಮಿಶ್ರಿತ ಹಳದಿ ಬಣ್ಣದ ಕಾಲುಗಳನ್ನು ಹೊಂದಿದೆ. ಹಾರುವಾಗ ಮೇಲಿನ ರೆಕ್ಕೆಗಳಲ್ಲಿನ ಕಪ್ಪು ಮತ್ತು ಬಿಳಿಯ ಬಣ್ಣವು ಸ್ಪಷ್ಟವಾಗಿ ಗೋಚರಿಸುತ್ತದೆ. ಹುಲ್ಲು ಮತ್ತು ಕಲ್ಲುಗಳಿರುವ ತೆರೆದ ಪ್ರದೇಶಗಳಲ್ಲಿ ಕೇವಲ ಒಂದು ಅಥವಾ ಎರಡು ಮೊಟ್ಟೆಗಳನ್ನು ಇಡುತ್ತದೆ. ಏಡಿಗಳು, ದೊಡ್ಡ ಕೀಟಗಳು ಮತ್ತು ಇತರ ಪ್ರಾಣಿಗಳ ಬೇಟೆಗಳು ಇವುಗಳ ಆಹಾರವಾಗಿವೆ.



**ಚಾತಕ ಪಕ್ಷಿ** © **ವಿನೀತ್ ಕರ್ಥ**

ಆಫ್ರಿಕಾ, ಭಾರತ, ಶ್ರೀಲಂಕಾ ಮತ್ತು ಮ್ಯಾನ್ಮಾರ್ ನ ವಿವಿಧ ಭಾಗಗಳಲ್ಲಿನ, ಮುಳ್ಳು ಗಿಡಗಳಿರುವ ಕುರುಚಲು ಅಥವಾ ತೆರೆದ ಕಾಡುಪ್ರದೇಶಗಳಲ್ಲಿ ಕಂಡುಬರುವ ಈ ಚಾತಕ ಪಕ್ಷಿಯು ಕುಕ್ಯುಲಿಡೇ (Cuculidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಲಾಮೇಟರ್ ಜಾಕೋಬಿನಸ್ (*Clamator jacobinus*) ಎಂದು ಕರೆಯಲಾಗುತ್ತದೆ. ಮಧ್ಯಮ ಗಾತ್ರದ ಈ ಹಕ್ಕಿಯ ದೇಹದ ಮೇಲ್ಭಾಗವು ಕಪ್ಪು ಬಣ್ಣದ್ದಾಗಿದ್ದು, ತಳಭಾಗವು ಬಿಳಿಯ ಬಣ್ಣದ್ದಾಗಿದೆ. ಹಾರಾಟದಲ್ಲಿ ಕಪ್ಪು ರೆಕ್ಕೆಗಳ ಮೇಲಿನ ಬಿಳಿಯ ತೇಪೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಸಿಳ್ಳೆಯಂತೆ ಕೇಳಿಸುವ ಕರೆಗಳನ್ನು ಕೇಳಬಹುದಾಗಿದೆ. ಇವು ಗೂಡನ್ನು ಕಟ್ಟದೆ ಇತರೆ ಪಕ್ಷಿಗಳ ಗೂಡಿನಲ್ಲಿ ಕೆಲವು ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳು ಆತಿಥೇಯ ಪಕ್ಷಿಯ ಮೊಟ್ಟೆಗಳ ಬಣ್ಣವನ್ನು ಹೋಲುವುದರಿಂದ ಮೊಟ್ಟೆಗಳು ಒಡೆದು ಮರಿಗಳಾಗಿ, ಯಶಸ್ವಿಯಾಗಿ ಅಲ್ಲೇ ಬೆಳೆಯುತ್ತವೆ. ಈ ಹಕ್ಕಿಗಳು ವಿವಿಧ ಕೀಟಗಳನ್ನು ಮತ್ತು ಕೆಲವೊಮ್ಮೆ ಹಣ್ಣುಗಳನ್ನು ಸೇವಿಸುತ್ತವೆ.

**ಚಿತ್ರ:** **ವಿನೀತ್ ಕರ್ಥ**

**ಲೇಖನ**: ದೀಪ್ತಿ ಎನ್.

# ನೀವೂ ಕಾನನಕ್ಕೆ ಬರೆಯಬಹುದು




ಯಾವ ಪ್ರದೇಶ ಶಾಶ್ವತವಾಗಿ ಅಥವಾ ಕಾಲಕ್ಕೆ ತಕ್ಕಂತೆ ನೀರಿನಿಂದ ಆವೃತವಾಗಿರುತ್ತದೋ ಆ ಪ್ರದೇಶವನ್ನು ಜೌಗು ಪ್ರದೇಶ ಎನ್ನುತ್ತಾರೆ. ಸಣ್ಣಸಣ್ಣ ತೊರೆಗಳು, ಕೆರೆಗಳು, ನದಿಗಳು, ಹವಳದ ದಿಣ್ಣೆಗಳು, ಮ್ಯಾಂಗ್ರೋವ್ ಕಾಡುಗಳು ಮೊದಲಾದವು ನೈಸರ್ಗಿಕ ಜೌಗು ಪ್ರದೇಶಗಳಾದರೆ ಭತ್ತದ ಗದ್ದೆ, ಮೀನುಸಾಕಾಣೆ ಕುಂಟೆಗಳು, ಉಪ್ಪಿನ ಇಂಗು ಗುಂಡಿಗಳು ಮಾನವ ನಿರ್ಮಿತ ಜೌಗು ಪ್ರದೇಶಗಳಾಗಿವೆ. ಹಿಂದೆ ಈ ಜೌಗು ಪ್ರದೇಶಗಳ ಪ್ರಾಮುಖ್ಯತೆ ಹಾಗೂ ಪರಿಸರದಲ್ಲಿ ಅವುಗಳ ಪಾತ್ರದ ಬಗ್ಗೆ ಅಷ್ಟಾಗಿ ಯಾರಿಗೂ ತಿಳಿದಿರಲಿಲ್ಲ ಹಾಗಾಗಿ 2ನೇ ಫೆಬ್ರುವರಿ 1971 ರಂದು ಕ್ಯಾಸ್ಪಿಯನ್ ಸಮುದ್ರದ ತೀರದಲ್ಲಿರುವ ರಮ್ ಸರ್ ನಲ್ಲಿ ನಡೆದ ಜೌಗು ಪ್ರದೇಶಗಳ ಸಮಾವೇಶದಲ್ಲಿ ಈ ಜೌಗು ಪ್ರದೇಶಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರತೀ ವರ್ಷ 2ನೇ ಫೆಬ್ರುವರಿ ಯಂದು ವಿಶ್ವ ಜೌಗು ಪ್ರದೇಶದ ದಿನ ಎಂದು ಆಚರಿಸಲು ತೀರ್ಮಾನಿಸಲಾಯಿತು.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.

# ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್

ಬನ್ನೇರುಘಟ್ಟ, ಬೆಂಗಳೂರು - 560083

## "ಕಾನನ" ಇ-ಮಾಸಿಕ ಪತ್ರಿಕೆಯ
## 15ನೇ ವಾರ್ಷಿಕೋತ್ಸವ

ಮತ್ತು

## ಡಾ. ಅಶ್ವಥ ಕೆ. ಎನ್. ರವರ "ಜಂಗಾಲ" ಪುಸ್ತಕ ಬಿಡುಗಡೆ ಕಾರ್ಯಕ್ರಮ

### ಮುಖ್ಯ ಅತಿಥಿಗಳು

**ಸ್ವಾಮಿ ವಿಷ್ಣುಮಯಾನಂದಜೀ**
ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್, ಶಿವನಹಳ್ಳಿ

**ಡಾ. ಸಂಜಯ್ ಗುಬ್ಬಿ**
ವನ್ಯಜೀವಿ ಜೀವಶಾಸ್ತ್ರಜ್ಞರು ಮತ್ತು ಹಿರಿಯ ವಿಜ್ಞಾನಿಗಳು

**ಶ್ರೀ ಗಣೇಶ್ ವಿ. ತಡಗಣಿ**
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು

**ಶ್ರೀಮತಿ ಕ್ಷಮಾ ವಿ. ಭಾನುಪ್ರಕಾಶ್**
ಶಿಕ್ಷಕರು ಮತ್ತು ಬರಹಗಾರರು


### ವಿಶೇಷ ಆಹ್ವಾನಿತರು

**ಶ್ರೀಮತಿ ರೂಪಶ್ರೀ ವಿಪಿನ್**
ಚಿತ್ರ ಕಲಾವಿದರು ಮತ್ತು ಲೇಖಕರು

**ಶ್ರೀ ಪುಂಡಲೀಕ ಕಲ್ಲಿಗನೂರು**
ಚಿತ್ರ ಕಲಾವಿದರು ಮತ್ತು ಲೇಖಕರು

**ಸ್ವಾಮಿ ಸೌಖ್ಯಾನಂದಜೀ**
ರಾಮಕೃಷ್ಣ ಮಠ, ಬಸವನಗುಡಿ

**ಶ್ರೀ ಹೆಚ್. ಸಿ. ಪೂರ್ಣೇಶ**
ವನ್ಯಜೀವಿ ಸಂರಕ್ಷಕರು, ಎನ್. ಸಿ. ಎಫ್.



12ನೇ ಜನವರಿ 2025, ಭಾನುವಾರ ಸಂಜೆ 4 ಗಂಟೆಗೆ

ಸ್ಥಳ: ಕೃಷ್ಣ ರಾಜೇಂದ್ರ ಸಭಾಂಗಣ,

ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು -560018

GOOGLE MAP

ಸರ್ವರಿಗೂ ಆದರದ ಸುಸ್ವಾಗತ

ದೂರವಾಣಿ: 9620223223 / 9740919832